ಜನಪದ ವಿಚಾರ


ಬೆಲೆ : ರೂ ೧೦-೦೦

ಚಿಂತನ ದರ್ಶನ ವಿಮರ್ಶನ

ಜನಪದ ಸೇವಾ ಟ್ರಸ್ಟ್ ಪ್ರಕಟಣೆ

ತಿಂಗಳ ವೈಚಾರಿಕ ಡೈಜೆಸ್ಟ್

ಸಂಪುಟ - ೧೫ ಅಕ್ಟೋಬರ್ - ೨೦೧೪ ಸಂಚಿಕೆ - ೦೩



ಹೊಸ ಯೋಜನಾ ಯೋಗ: ಮರುಚಿಂತನೆ ಅಗತ್ಯ

ಜನಪದ ವಿಚಾರದಲ್ಲಿ

ಅಕ್ಟೋಬರ್– 2014

೧) ಹೊಸ ಯೋಜನಾ ಆಯೋಗ : ಮರುಚಿಂತನೆ ಅಗತ್ಯ

– ಸುರೇಂದ್ರ ಕೌಲಗಿ

ಇದುವರೆಗಿದ್ದ ಯೋಜನಾ ಆಯೋಗದಿಂದ ಆದ ದೇಶದ ಅಭಿವೃದ್ಧಿ ಅಸ್ಥಿರ ಅಭಿವೃದ್ಧಿಯಾಗಿದೆ. ಭೂಮಿ,ಪರಿಸರ,ಸಂಸ್ಕೃತಿ ಮತ್ತು ಸಾಮಾಜಿಕ ಮೌಲ್ಯಗಳು ಹಾಳಾಗಿವೆ. ರಚಿತವಾಗಲಿರುವ ಹೊಸ ಯೋಜನಾ ಆಯೋಗ ಭೂಮಿ,ಪರಿಸರ,ಸಂಸ್ಕೃತಿ ಮತ್ತು ಸಾಮಾಜಿಕ ಮೌಲ್ಯಗಳನ್ನು ವೃದ್ಧಿಸುವಂಥ ಸುಸ್ಥಿರ ಅಭಿವೃದ್ಧಿ ಯೋಜನೆಗೆ ನಾಂದಿ ಹಾಡಲಿ ಎಂಬುದು ಈ ಲೇಖನದ ಆಶಯ.

೨) ಗಾಂಧೀಜಿಯಿಂದ ನಾವು ಕಲಿತದ್ದೇನು?

– ದಿನೇಶ್ ಅಮಿನ್‌ಮಟ್ಟು

ಗಾಂಧೀ ಸ್ಮರಣೆಯಲ್ಲಿ ತೊಡಗಿರುವವರೆಲ್ಲರೂ ಗಾಂಧೀ ತೋರಿದ ಹಾದಿಯಲ್ಲಿ ಹೆಜ್ಜೆ ಹಾಕುತ್ತಿದ್ದಾರೆಯೇ ಎಂಬ ಪ್ರಶ್ನೆಗೆ ಉತ್ತರವನ್ನು ಈ ಲೇಖನದಲ್ಲಿ ಹುಡುಕಿರಿ.

೩) ಜಮ್ನಾಲಾಲ್ ಬಜಾಜ್

– ವಿನೋಬಾ

ಸರ್ಕಾರೇತರ ಸಂಸ್ಥೆಯೊಂದು ಸಮಾಜ ಸೇವೆಗಾಗಿ ಕೊಡಮಾಡುವ ಪ್ರತಿಷ್ಠಿತ ಪ್ರಶಸ್ತಿ "ಜಮ್ನಾಲಾಲ್ ಬಜಾಜ್ ಪ್ರಶಸ್ತಿ"ಜಮ್ನಾಲಾಲರ ವ್ಯಕ್ತಿತ್ವದ ಕಿರುಪರಿಚಯ ಈ ಲೇಖನ.

೪) ಶ್ರೀಮಂತಿಕೆಯ ಬೆಟ್ಟ , ಬಡತನದ ಗುಂಡಿ

– ಮಹದೇವ್ ವಿದ್ರೋಹಿ

ಜಾಗತಿಕರಣ, ಖಾಸಗೀಕರಣ, ಮತ್ತು ಕೈಗಾರಿಕೀಕರಣದಿಂದಾಗಿ ಉಂಟಾಗಿರುವ ಆರ್ಥಿಕ ಅಸಮಾನತೆಯ ನಗ್ನ ಚಿತ್ರ ಈ ಲೇಖನದಲ್ಲಿ.

೫) ಸುಲಭೋಪಾಯದ ಎಡವಟ್ಟುಗಳು

– ಪ್ರಸನ್ನ

ಯಂತ್ರಗಳನ್ನು ಬಳಸಿಕೊಂಡು ಸುಖ ಜೀವನ ಬದುಕಿ ಬಿಡುವುದು ಉತ್ತಮ ಮೌಲ್ಯ ಹೌದೇ ಎಂದು ಯೋಚಿಸಲು ಈ ಲೇಖನ ಕರೆ ಕೊಡುತ್ತದೆ.

೬) ಸೀಬರ್ಡ್ ನೌಕಾನೆಲೆ ಮತ್ತು ಕಾರವಾರದ ಗೋಳು

– ನಾಗತಿಹಳ್ಳಿ ಚಂದ್ರಶೇಖರ್

ಆಧುನಿಕ ಅಭಿವೃದ್ಧಿ ಎಂಥ ಘೋರ ಶಾಪವೆಂಬುದನ್ನು ಈ ಲೇಖನ ತಿಳಿಸುತ್ತದೆ.

೭) ನನ್ನ ತಾತನನ್ನು ನಾ ಕಂಡಂತೆ

– ಎಸ್.ಎನ್.ಗಿರೀಶ್

ಜೀವನದಲ್ಲಿ ಪ್ರಗತಿ ಸಾಧಿಸಿದ ಓರ್ವ ಐ.ಎ.ಎಸ್ ಅಧಿಕಾರಿ ತನ್ನ ತಾತನವರನ್ನು ಕೃತಜ್ಞತೆಯಿಂದ ಸ್ಮರಿಸಿ ಬರೆದ ಲೇಖನವಿದು.

೮) ಸರ್ವೋದಯ ಆಂದೋಲನದ ಮುನ್ನಡೆ

೯) ಜನಪದ ನಿಲಯದ ಅಂತರಂಗದಲ್ಲಿ – ೧೨೬

ಜನಪದ ವಿಚಾರ

ತಿಂಗಳ ವೈಚಾರಿಕ ಡೈಜೆಸ್ಟ್

ಅಕ್ಟೋಬರ್ - ೨೦೧೪
ಸಂಪುಟ - ೧೫
ಸಂಚಿಕೆ - ೦೩

ಸಂಪಾದಕ
ಸುರೇಂದ್ರ ಕೌಲಗಿ

ಸಲಹಾ ಸಮಿತಿ
ಜನಪದ ಸೇವಾ ಟ್ರಸ್ಟ್
ಧರ್ಮದರ್ಶಿ ಮಂಡಳಿ

ಚಂದಾ ವಿವರ
ವಾರ್ಷಿಕ : ರೂ ೧೦೦/-
ಬಿಡಿ ಸಂಚಿಕೆ : ರೂ ೧೦/-

ಸಂಪರ್ಕ ವಿಳಾಸ
ಜನಪದ ಸೇವಾ ಟ್ರಸ್ಟ್ (ರಿ)
ಮೇಲುಕೋಟೆ - 571431
ಮಂಡ್ಯ ಜಿಲ್ಲೆ

ಫೋನ್ : 08236 - 316344
08236 - 299854
email :
janapada@yahoo.com
Web: janapada.net

ನನ್ನವ್ವ ಮತ್ತು ಚರಕ

ಯಂತ್ರಗಳ ಯುಗದಲ್ಲಿ
ಚರಕವ ಕುರಿತು
ನಾ ಹೇಗೆ ಬರೆಯಲಿ ಕವನ?

ಯುಗಗಳೇ ಉರುಳಲಿ,
ಯಂತ್ರಗಳೇ ಬರಲಿ,
ನನ್ನವ್ವನ ಚರಕದ ಸಂಬಂಧ
ನಾ ಹೇಗೆ ವರ್ಣಿಸಲಿ!

ನನ್ನವ್ವ ಪ್ರತಿ ದಿನ
ಮುಂಜಾನೆ ಚರಕಕ್ಕೆ ಕೈಮುಗಿದು
ಉಣ್ಣೆ ಹಿಡಿದು ಕುಳಿತು
ಸಂಜೆಯಾಗುವವರೆಗೂ ನೂಲು ತೆಗೆದು
ಕಾಲ ನೂಕುತಿರುವಳು.

ದುಡಿದು ದಣಿವಾದರೂ
ನೋವು ಮರೆತು
ಸಂಪಾದನೆ ಮಾಡಿ
ಮನೆ ಮಂದಿಗೆಲ್ಲಾ
ಅವಳಿಂದಲೇ ಅನ್ನ ಬಟ್ಟೆ.

ಚರಕ ನನ್ನವ್ವನ
ಬದುಕಿನ ದಾರಿ ದೀಪ,
ಮನೆ ದೇವರ ತೇರು.

-ಜಿ.ಎ.ಜಗದೀಶ

ಚಿಂತನೆಗೊಂದು ಸಂಗತಿ

ಮೋದಿ ಮತ್ತು ಹಿಂದಿ ಒಟ್ಟಿಗೆ ಸಾಗುತ್ತಿವೆ. ದೇಶ ವಿದೇಶದ ಎಲ್ಲ ಸಮಾರಂಭಗಳಲ್ಲಿ ಮೋದಿ ಹಿಂದಿಯಲ್ಲೇ ವ್ಯವಹರಿಸುತ್ತಾರೆ. ಬರಲಿರುವ ಅಮೇರಿಕಾ ಯಾತ್ರೆಯ ಸಂದರ್ಭದಲ್ಲೂ ಮತ್ತು ವಿಶ್ವ ರಾಷ್ಟ್ರಸಂಸ್ಥೆಯಲ್ಲೂ ಹಿಂದಿಯಲ್ಲೇ ವ್ಯವಹರಿಸುವ ಸಾಧ್ಯತೆಯಿದೆ. ಇಂಗ್ಲೀಷ್ ಭಾಷೆಯ ಒತ್ತಡದಿಂದ ನರಳುತ್ತಿರುವ ಪ್ರಾದೇಶಿಕ ಭಾಷೆಗಳು ಇನ್ನು ಮುಂದೆ ಹಿಂದಿಯ ಆಕ್ರಮಣಕಾರಿ ಧೋರಣೆಯಿಂದ ನರಳಬೇಕಾಗುತ್ತದೆ. ಹಿಂದಿ ರಾಷ್ಟ್ರಭಾಷೆಯಾಗಿ ರೂಪಗೊಳ್ಳಬೇಕೆಂದು ಗಾಂಧೀ ಬಯಸಿದ್ದರೂ ದೇಶದಲ್ಲಿರುವ ಎಲ್ಲ ಪ್ರಾದೇಶಿಕ ಭಾಷೆಗಳಿಗೆ ಮನ್ನಣೆ ಸಿಗಬೇಕು ಮತ್ತು ಆಯಾ ಪ್ರದೇಶದ ಆಡಳಿತ ಭಾಷೆಯಾಗಿ ಅಲ್ಲಿಯ ಭಾಷೆ ಸಮರ್ಥವಾಗಬೇಕೆಂದು ಕೂಡ ಬಯಸಿದ್ದರು. ಆದರೆ ಸ್ವತಂತ್ರ ಭಾರತದ ಸರ್ಕಾರ ಹಿಂದಿಯನ್ನು ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಹೇರುತ್ತಿದೆ. ಕರ್ನಾಟಕದಲ್ಲಿರುವ ಕೇಂದ್ರ ಸರ್ಕಾರದ ಅಧೀನಕ್ಕೆ ಒಳಪಟ್ಟಿರುವ ಬ್ಯಾಂಕ್, ರೈಲು, ಸಾರ್ವಜನಿಕ ಕ್ಷೇತ್ರದ ಕೈಗಾರಿಕೆಗಳು, ಆಕಾಶವಾಣಿ ಮತ್ತು ವಿದ್ಯಾಸಂಸ್ಥೆಗಳಲ್ಲಿ ಹಿಂದಿ ಪ್ರಾಬಲ್ಯ ಹೆಚ್ಚಾಗಿದೆ. ಹಿಂದಿಯೇತರ ಜನರನ್ನು ಮತ್ತು ಅವರ ಭಾಷೆಯನ್ನು ಉಪೇಕ್ಷಿಸಲಾಗುತ್ತಿದೆ ಹಾಗೂ ಅಗೌರವಿಸಲಾಗುತ್ತಿದೆ. ಪ್ರತಿ ವರ್ಷ ಈ ಸಂಸ್ಥೆಗಳಲ್ಲಿ "ಹಿಂದಿ ದಿವಸ್" ಆಚರಿಸಲಾಗುತ್ತದೆ. ಆದರೆ ಯಾವ ಸಂದರ್ಭದಲ್ಲೂ "ಕನ್ನಡ ದಿವಸ" ಆಚರಿಸುವುದಿಲ್ಲ. ರಾಜ್ಯ ಸರ್ಕಾರ, ಕನ್ನಡ ಅಭಿವೃದ್ಧಿ ಪ್ರಾಧಿಕಾರ ಮುಂತಾದವುಗಳು ಕಣ್ಣು ಮುಚ್ಚಿ ಕುಳಿತಿವೆ. ಸರೋಜಿನಿ ಮಹಿಷಿ ವರದಿಯ ಅನುಷ್ಠಾನ ಆಗಲೇ ಇಲ್ಲ. ಇಂಗ್ಲೀಷ್ ಮತ್ತು ಹಿಂದಿ ಭಾಷೆಗಳನ್ನಷ್ಟೇ ಏಕೆ ಜಗತ್ತಿನ ಇತರ ಪ್ರಮುಖ ಭಾಷೆಗಳಾದ ಜರ್ಮನ್, ಫ್ರೆಂಚ್, ರಷಿಯನ್, ಜಪಾನಿ, ಚೀನೀ, ಪರ್ಷಿಯನ್ ಮುಂತಾದ ಭಾಷೆಗಳನ್ನೆ ಕಲಿಯೋಣ. ದೇಶದ ನೆರೆಹೊರೆಯ ಭಾಷೆಗಳನ್ನು ಕಲಿಯೋಣ. ವ್ಯವಹಾರ ಸರಾಗವಾಗಿ ನಡೆಯುವಂತಾಗಲೀ ಆದರೆ ಪ್ರಾದೇಶಿಕ ಭಾಷೆಯ ಪ್ರಾಧಾನ್ಯತೆ ಗೌಣವಾಗದಿರಲಿ. ಹಿಂದಿಯ ಆಕ್ರಮಣಕಾರಿ ಮನೋಭಾವ ಬಲಗೊಳ್ಳುವ ಮೊದಲು ಪ್ರಾದೇಶಿಕ ಭಾಷಿಕ ಜನರು ಎಚ್ಚೆತ್ತುಕೊಳ್ಳೋಣ.

ಹೊಸ ಯೋಜನಾ ಆಯೋಗ : ಮರುಚಿಂತನೆ ಅಗತ್ಯ

ಇದುವರೆಗಿದ್ದ ಯೋಜನಾ ಆಯೋಗದಿಂದ ಆದ ದೇಶದ ಅಭಿವೃದ್ಧಿ ಅಸ್ಥಿರ ಅಭಿವೃದ್ಧಿಯಾಗಿದೆ. ಭೂಮಿ,ಪರಿಸರ,ಸಂಸ್ಕೃತಿ ಮತ್ತು ಸಾಮಾಜಿಕ ಮೌಲ್ಯಗಳು ಹಾಳಾಗಿವೆ. ರಚಿತವಾಗಲಿರುವ ಹೊಸ ಯೋಜನಾ ಆಯೋಗ ಭೂಮಿ,ಪರಿಸರ,ಸಂಸ್ಕೃತಿ ಮತ್ತು ಸಾಮಾಜಿಕ ಮೌಲ್ಯಗಳನ್ನು ವೃದ್ಧಿಸುವಂಥ ಸುಸ್ಥಿರ ಅಭಿವೃದ್ಧಿ ಯೋಜನೆಗೆ ನಾಂದಿ ಹಾಡಲಿ ಎಂಬುದು ಈ ಲೇಖನದ ಆಶಯ.

– ಸುರೇಂದ್ರ ಕೌಲಗಿ

ಕಳೆದ ಐವತ್ತನಾಲ್ಕು ವರ್ಷಗಳಿಂದ ಇದ್ದ ಮತ್ತು ಇದುವರೆಗೆ 12 ಪಂಚವಾರ್ಷಿಕ ಯೋಜನೆಗಳನ್ನು ತಯಾರಿಸಿದ್ದ ಯೋಜನಾ ಆಯೋಗವನ್ನು ರದ್ದುಗೊಳಿಸಿ ಬದಲಾದ ರಾಜಕೀಯ ಮತ್ತು ಆರ್ಥಿಕ ಸ್ಥಿತಿಗೆ ಅನುಗುಣವಾಗುವಂತಹ ಹೊಸ ಯೋಜನಾ ಆಯೋಗವೊಂದನ್ನು ರಚಿಸಲು ಆಲೋಚಿಸಲಾಗುತ್ತಿದೆ. ಕಾಲಕ್ಕೆ ತಕ್ಕ ಹಾಗೆ ಬದಲಾವಣೆಯಾಗುವುದು ಕ್ರಿಯಾಶೀಲತೆಯ ಮತ್ತು ಜಾಗೃತ ಪರಿಜ್ಞಾನದ ಸಂಕೇತ. ಆದರೆ ಬದಲಾವಣೆಗೊಳ್ಳುವ ಮೊದಲು ಹಿಂದೆ ಮಾಡಿದ್ದ ಯೋಜನೆಗಳಿಂದ ಏನೆಲ್ಲಾ ತಪ್ಪುತಡೆಗಳಾದವೊ ಅವು ಹೊಸ ಬದಲಾವಣೆಯ ಕಾಲದಲ್ಲಿ ಮರುಕಳಿಸದಂತೆ ಎಚ್ಚರವಹಿಸಬೇಕಾದುದು ಜಾಣತನ. ದೇಶದಲ್ಲಿ ಯೋಜನಾ ಯುಗ ಪ್ರಾರಂಭವಾದಾಗಿನಿಂದ ಇದುವರೆಗೆ ಆಗಿರುವ ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ಮತ್ತು ಪರಿಸರಾತ್ಮಕ ಬದಲಾವಣೆಗಳನ್ನು ಕುರಿತು ಆಲೋಚಿಸುವ ಅಗತ್ಯ ಉಂಟಾಗಿದೆ. ಹಳೆಯದನ್ನು ಅಳಿಸಿ ಹೊಸದನ್ನು ಬರೆಯುವ ಸಂದರ್ಭದಲ್ಲಿ ಹೊಸ ರೀತಿಯಲ್ಲಿ ಯೋಚನೆ ಮಾಡುವುದು ಅಗತ್ಯವೆನಿಸುತ್ತದೆ.

ಇದುವರೆಗೆ ಪಂಚವಾರ್ಷಿಕ ಯೋಜನೆಗಳ ಮೂಲಕ ಆಗಿರುವ ಅಭಿವೃದ್ಧಿಯಿಂದಾಗಿ ಕೃಷಿ ಭೂಮಿ ಮತ್ತು ಅರಣ್ಯ ಪ್ರದೇಶ ಗಣನೀಯ ಪ್ರಮಾಣದಲ್ಲಿ ಕಡಿಮೆಯಾಗಿದೆ. ಹವಾಮಾನ ವೈಪರೀತ್ಯ ಉಂಟಾಗಿದೆ. ಸರಕಾರದ ವಲಯ ಕ್ಷೀಣಿಸುತ್ತಾ ಹೋಗುತ್ತಿದೆ. ಖಾಸಗಿ ವಲಯ ವಿಸ್ತಾರಗೊಳ್ಳುತ್ತಿದೆ. ಸಾರ್ವಜನಿಕ ಕ್ಷೇತ್ರಗಳಲ್ಲಿಯ ಕೈಗಾರಿಕೆಗಳನ್ನು ಖಾಸಗೀಕರಣಗೊಳಿಸಲಾಗುತ್ತಿದೆ. ರಾಜ್ಯ ಸರಕಾರಗಳು ಕೇಂದ್ರ ಸರಕಾರದ ಎದುರು ಭಿಕ್ಷಾಪಾತ್ರೆ ಹಿಡಿದು ನಿಲ್ಲುವಂಥ ಸ್ಥಿತಿ ಬಂದಿದೆ. ಸಮಾಜದಲ್ಲಿ ಆರ್ಥಿಕ ಅಸಮಾನತೆ ಉಂಟಾಗಿದೆ.


ಯೋಜನಾ ಆಯೋಗ ಪ್ರಾರಂಭವಾದಾಗಿನಿಂದ ದೇಶವನ್ನು ಭೌತಿಕವಾಗಿ

ಕಟ್ಟುವ ಮತ್ತು ಅಭಿವೃದ್ಧಿ ಪಡಿಸುವ ಬಗ್ಗೆ ಯೋಜನೆ ಹಾಕಿಕೊಳ್ಳುತ್ತಾ ಬರಲಾಯಿತೆ ಹೊರತು ಸ್ವತಂತ್ರ ಭಾರತದಲ್ಲಿ ಹೊಸ ಮೌಲ್ಯಾಧಾರಿತ ಸುಸಂಸ್ಕೃತ ಮತ್ತು ಹೆಚ್ಚು ನಾಗರೀಕ ಸಮಾಜ ನಿರ್ಮಿಸುವ ಯೋಜನೆ ಹಾಕಿಕೊಳ್ಳಲಿಲ್ಲ. ಆ ನಿಟ್ಟಿನಲ್ಲಿ ಯೋಚನೆಯನ್ನೇ ಮಾಡಲಿಲ್ಲ. ಅಭಿವೃದ್ಧಿ ಯೋಜನೆಗಳಿಂದ ಉಂಟಾಗುವ ಸುಧಾರಣೆಗಳನ್ನು ಸರ್ವರ ಹಿತಕ್ಕಾಗಿ ಉಪಯೋಗಿಸಿಕೊಳ್ಳಬೇಕೆಂಬ ಹಾಗೂ ತಮ್ಮ ಜೀವನದ ಸುಖ - ನೆಮ್ಮದಿ - ಶಾಂತಿಗಾಗಿ ಉಪಯೋಗಿಸಿಕೊಳ್ಳಬೇಕೆಂಬ ಮನೋಭಾವ ಜನರಲ್ಲಿ ಮೂಡಲಿಲ್ಲ ಬದಲಿಗೆ ಪೈಪೋಟಿ, ಹಣದ ದಾಹ, ಭ್ರಷ್ಟಾಚಾರ, ಅತ್ಯಾಚಾರ, ಶೋಷಣೆ, ಆತ್ಮಹತ್ಯೆಗಳಂತಹ ಸಮಸ್ಯೆಗಳೇ ಹೆಚ್ಚಿಕೊಂಡವು.

ಯೋಜನೆಗಳ ಸರಣಿ ಪ್ರಾರಂಭವಾದ ಮೇಲೆ ಜನರಲ್ಲಿ ನಕಾರಾತ್ಮಕ ಮನೋಭಾವ ಬೆಳೆದುದು ಎಲ್ಲರ ಅನುಭವಕ್ಕೆ ಬರುತ್ತಿದೆ. ಆ ನಕಾರಾತ್ಮಕ ಮನೋಭಾವ ದೇಶದ ಜನರು ಹೆಚ್ಚು ಹೆಚ್ಚಾಗಿ ಸರಕಾರವನ್ನು ಅವಲಂಬಿಸುವಂತೆ ಆದದ್ದು. ಸ್ವತಂತ್ರ ದೇಶದ ಜನರು ಸ್ವಾವಲಂಬಿಗಳಾಗಿ ಜವಾಬ್ದಾರಿಯುತ ಜೀವನ ನಡೆಸುವ ಬದಲು ಅವರೆಲ್ಲರು ಸರಕಾರಾವಲಂಬಿಗಳಾದರು. ಚಿಕ್ಕ ವಿಷಯವೇ ಇರಲಿ, ದೊಡ್ಡ ವಿಷಯವೇ ಇರಲಿ ಎಲ್ಲದಕ್ಕೂ ಮತ್ತು ಎಲ್ಲ ಕಾಲಕ್ಕೂ, ಎಲ್ಲ ವಿಷಯಕ್ಕೂ, ಸರಕಾರವನ್ನವಲಂಬಿಸುವ ಮನೋಭಾವ ಬೆಳೆಯಿತು. ರಚಿತವಾಗಲಿರುವ ಯೋಜನಾ ಆಯೋಗ ಜನತೆಯಲ್ಲಿ ಮನೆ ಮಾಡಿರುವ ಸರಕಾರಾವಲಂಬಿ ಮನೋಧರ್ಮವನ್ನು ಬದಲಾಯಿಸಿ ಅವರು ಸ್ವಾವಲಂಬಿಗಳಾಗಿ ಕ್ರಿಯಾಶೀಲರಾಗುವಂತೆ ಮಾಡುವಂತೆ ಯೋಜನೆ ರೂಪಿಸಬೇಕು. ಯೋಜನೆಗಳ ಉದ್ದೇಶ ಸಿರಿವಂತರೋದಯವಾಗದೆ ಅಂತ್ಯೋದಯವಾಗುವಂತೆ ಯೋಜನೆಗಳ ಗುರಿಯಾಗಬೇಕು. ದೇಶದ ಅಭಿವೃದ್ಧಿ ಕಾರ್ಯದಲ್ಲಿ ವಿದೇಶೀ ಕಂಪನಿಗಳಿಗೆ ಕೆಂಪು ಜಮಖಾನ ಹಾಸುವ ಪ್ರವೃತ್ತಿಯನ್ನು ಕಡಿಮೆ ಮಾಡಿ ದೇಶದ ಸಂಪನ್ಮೂಲಗಳನ್ನೇ ವಿವೇಕಯುತವಾಗಿ ಬಳಸಿಕೊಂಡು ಸ್ವರಾಜ್ಯ ಸ್ಥಾಪಿಸುವ ಕೆಲಸವನ್ನು ಹೊಸ ಯೋಜನಾ ಆಯೋಗ ಮಾಡಬೇಕು.

ದೇಶದೊಳಗಿರುವ ವೈವಿಧ್ಯಮಯ ದೊಡ್ಡ ಜನಸಮುದಾಯವುಳ್ಳ ಸಮಾಜವನ್ನು ಯಾವ ರೀತಿ ಕಟ್ಟಬೇಕೆಂಬ ಬಗ್ಗೆ ಚಿಂತನೆ ನಡೆಯಲೇ ಇಲ್ಲ. ರಷ್ಯಾ, ಚೀನಾ, ಇಂಗ್ಲೆಂಡ್, ಅಮೇರಿಕಾದಂಥ ದೇಶಗಳಲ್ಲಿಯಂತೆ ಭಾರತದಲ್ಲಿಯೂ ಕೂಡ ಈ ಯೋಜನಾ ಆಯೋಗವನ್ನು ರಚಿಲಾಯಿತೇ ಹೊರತು ನಮ್ಮ ದೇಶದ ಸಂಸ್ಕೃತಿಗೆ ಅನುಗುಣವಾಗಿ, ಭೂ ವಾಯುಗುಣಕ್ಕೆ ಅನುಗುಣವಾಗಿ ಸಮಾಜ ಕಟ್ಟುವ ಯೋಜನಾ ಆಯೋಗವನ್ನು ರಚಿಸಲಿಲ್ಲ. ಯೋಜನೆ ಎಂದರೆ ಭೌತಿಕ ಅಭಿವೃದ್ಧಿ ಯೋಜನೆ ಎಂದೆ ವ್ಯಾಖ್ಯಾನಿಸಲಾಗುತ್ತಿದೆ. ಸಮಾಜ ರಚನೆಯ ಯೋಜನೆಯ ಮಾತನ್ನೆ ಆಡುವುದಿಲ್ಲ. ಭೌತಿಕ ಅಭಿವೃದ್ಧಿ ಯೋಜನೆಗೆ ಯಾವ ಗುರಿಯೂ ಇಲ್ಲ, ಮಿತಿಯೂ ಇಲ್ಲ. ಅಭಿವೃದ್ಧಿಗಾಗಿ ಅಭಿವೃದ್ಧಿ, ಯೋಜನೆಗಾಗಿ

ಯೋಜನೆ ನಡೆಯುತ್ತಿದೆಯೇ ಹೊರತು ಅಭಿವೃದ್ಧಿಯು ಯಾವ ಗುರಿಯ ಸಾಧ್ಯಕ್ಕಾಗಿ ಸಾದನಗಳೆಂಬುದು ಸ್ಪಷ್ಟವಾಗಿಲ್ಲ. ಗೊತ್ತು ಗುರಿಯಿಲ್ಲದ ಮತ್ತು ಉದ್ದೇಶ ರಹಿತ ಯೋಜನೆಗಳು ದೇಶದ ಪ್ರಾಕೃತಿಕ ಸಂಪನ್ಮೂಲಗಳನ್ನು ಹಾಳುಗೆಡವುದರಲ್ಲಿ ಯಶಸ್ಸು ಪಡೆಯುತ್ತವೆಯೇ ಹೊರತು ದೇಶದಲ್ಲಿಯ ಸಮಾಜದ ಒಳಿತಿಗೆ ಪ್ರಯೋಜನಕಾರಿಯಾಗುವಂತೆ ಉಪಯೋಗಿಸಲಾಗುವುದಿಲ್ಲ. ಸ್ವಾತಂತ್ರ್ಯ ಪೂರ್ವದಲ್ಲಿದ್ದ ಕಾಂಗ್ರೆಸ್ ಪಕ್ಷವನ್ನು ಸ್ವಾತಂತ್ರ್ಯ ನಂತರ ಅದರ ನಿರರ್ಥಕತೆಯನ್ನು ಅರಿತ ಗಾಂಧೀಜಿ ಆ ಪಕ್ಷದ ವಿಸರ್ಜನೆಯಾಗಿ ಲೋಕಸೇವಕ ಸಂಘವೆಂದು ಪುನರ್‌ರಚಿತಗೊಳ್ಳಬೇಕೆಂದು ಸಲಹೆ ಕೊಟ್ಟಿದ್ದರು. ಆದರೆ ಆ ಸಲಹೆ ಕಾರ್ಯರೂಪಕ್ಕೆ ಬರದೆ ಇದ್ದುದರಿಂದ ದೇಶದ ರಾಜಕೀಯ, ಆರ್ಥಿಕ. ಕೈಗಾರಿಕಾ ಮತ್ತು ಸಾಮಾಜಿಕ ಸ್ಥಿತಿ ಬೇರೆ ರೂಪವನ್ನು ತಾಳಿತು. ಭಾರತೀಯತೆ ಹೋಗಿ ಪಾಶ್ಚಾತೀಯತೆ ಬಂತು. ಹೊಸ ಯೋಜನಾ ಆಯೋಗ ರಚಿತಗೊಳ್ಳುತ್ತಿರುವ ಸಂದರ್ಭದಲ್ಲಿ ಗತಿಸಿದ ಯೋಜನಾ ಆಯೋಗದ ಪರಿಣಾಮಗಳ ಸಿಂಹಾವಲೋಕನ ಮಾಡಿ ಹೊಸ ರೀತಿಯಲ್ಲಿ ಹೊಸ ಉದ್ದೇಶ ಮತ್ತು ಗುರಿಗಳೊಂದಿಗೆ ಹೊಸ ಸುಸಂಸ್ಕೃತ ನಾಗರೀಕ ಸಮಾಜ ನಿರ್ಮಾಣದ ಬಗ್ಗೆ ನರೇಂದ್ರ ಮೋದಿ ಆಲೋಚಿಸಬೇಕಾದುದು ಅಗತ್ಯ. ಸಂವಿದಾನದಲ್ಲಿ ಅಭಿವೃದ್ಧಿಯ ಮಾತು ಎಲ್ಲೂ ನಮೂದಾಗಿಲ್ಲ. ಆದರೆ ದೇಶದ ಸಂಪತ್ತು ಪ್ರಜೆಗಳೆಲ್ಲರ ಹಿತಕ್ಕೆ ತಾರತಮ್ಯವಿಲ್ಲದೆ ಉಪಯೋಗಕ್ಕೆ ಬರಬೇಕೆಂಬ ಆಶಯ ಅದರಲ್ಲಿದೆ. ಇದುವರೆಗಿನ ಅಭಿವೃದ್ಧಿ ಯೋಜನೆಗಳಿಂದಾಗಿ ಜಲ, ಜಂಗಲ ಮತ್ತು ಜಮೀನಿನ ದೋಹನವಾಗಿ ಜನರ ಉಚ್ಚಾಟನೆಯಾಗಿದೆ. ಪುನರ್‌ವಸತಿಯಾಗಿಲ್ಲ. ನಿರಾಶ್ರಿತರ ಜೀವನ ಅತಂತ್ರವಾಗಿದೆ. ಖಾಸಗಿ ಮತ್ತು ಸಾರ್ವಜನಿಕ ಕ್ಷೇತ್ರದಲ್ಲಿಯ ವಿಭಿನ್ನ ಯೋಜನೆಯಿಂದಾಗಿ ಸ್ವಾತಂತ್ರ್ಯದಿಂದೀಚೆಗೆ ಆರು ಕೋಟಿ ಜನ ಉಚ್ಚಾಟಿತಗೊಂಡಿದ್ದಾರೆ. ಹೊಸ ಅಧ್ಯಯನದ ಪ್ರಕಾರ ಪ್ರತಿದಿನ ಎರಡು ಸಾವಿರ ರೈತರು ವ್ಯವಸಾಯ ಬಿಡುತ್ತಿದ್ದಾರೆ. ಇದೆಲ್ಲವು ಸಂವಿದಾನದ ಆಶಯಕ್ಕೆ ವಿರುದ್ಧವಾಗಿದೆ. ಯೋಜನೆಗಳಿಂದಾಗಿ ಆಗುತ್ತಿರುವ ಸಾಮಾಜಿಕ, ಆರ್ಥಿಕ, ರಾಜಕೀಯ ವೈಪರೀತ್ಯಗಳ ದೃಷ್ಟಿಯಿಂದ ನೋಡಿದಲ್ಲಿ ಅಭಿವೃದ್ಧಿಯ ಪರಿಕಲ್ಪನೆಯೆ ಸಂವಿದಾನಕ್ಕೆ ವಿರೋಧವಾಗಿದೆ! ಆದ್ದರಿಂದ ಹೊಸ ಯೋಜನಾ ಆಯೋಗದ ಮೂಲಕ ಕೈಗೊಳ್ಳಬಹುದಾದ ಅಭಿವೃದ್ಧಿ ಯೋಜನೆಗಳಿಂದ ದೇಶದ ಪ್ರಜಾಪ್ರಭುತ್ವ ಹಳ್ಳಿಯಿಂದ ದಿಲ್ಲಿಯವರೆಗೆ ಬಲಗೊಳ್ಳುವಂತೆ ರಚಿತವಾಗಬೇಕು. ಸ್ವತಹ ಮೋದಿಯವರೆ ಹೇಳಿದಂತೆ ಹಳೆ ಮನೆಯ ಮಾರ್ಪಾಡಿನ ಖರ್ಚಿಗಿಂತ ಹೊಸ ಮನೆ ಕಟ್ಟುವ ಖರ್ಚು ಕಡಿಮೆಯಾಗುವುದರಿಂದ ಹಳೆ ಯೋಜನೆಯ ದುಬಾರಿ ಶೈಲಿಗಿಂತ ಹೊಸ ಯೋಜನಾ ಶೈಲಿಯನ್ನು ಅನುಸರಿಸಿ ದೇಶವನ್ನು ಜಗತ್ತಿಗೆ ಮಾದರಿ ದೇಶವನ್ನಾಗಿ ಮಾಡಲೆಂದು ಹಾರೈಸೋಣ. ■



ಗಾಂಧೀಜಿಯಿಂದ ನಾವು ಕಲಿತದ್ದೇನು?

– ದಿನೇಶ್ ಅಮಿನ್‌ಮಟ್ಟು

ಕಳೆದ ಒಂದು ವರ್ಷದ ಅವಧಿಯಲ್ಲಿ ನಡೆದಷ್ಟು 'ಗಾಂಧಿ ಸ್ಮರಣೆ' ಸ್ವತಂತ್ರ ಭಾರತದಲ್ಲಿ ಹಿಂದೆಂದೂ ನಡೆದಿರಲಿಕ್ಕಿಲ್ಲ. ಅಣ್ಣಾ ಹಜಾರೆಯವರ ಚಳುವಳಿಯಿಂದ ಪ್ರಾರಂಭಗೊಂಡು ಗುಜರಾತ್ ಮುಖ್ಯಮಂತ್ರಿ ನರೇಂದ್ರ ಮೋದಿಯವರ 'ಸದ್ಭಾವನಾ ಉಪವಾಸ'ದ ವರೆಗೆ ಈ ಸ್ಮರಣೆಯ ಯಾತ್ರೆ ಮುಂದುವರಿದಿದೆ. ಅಣ್ಣಾ ಹಜಾರೆಯವರನ್ನು ಆಗಲೇ ಜನ 'ದೇಶ ಕಂಡ ಎರಡನೇ ಗಾಂಧಿ' ಎಂದು ಕೊಂಡಾಡತೊಡಗಿದ್ದಾರೆ. 'ಗುಜರಾತ್‌ನ ಮಣ್ಣಿನ ಮಗ ಗಾಂಧೀಜಿಯವರೇ ನನ್ನ ಆದರ್ಶ' ಎಂದು ನರೇಂದ್ರ ಮೋದಿ ಗುಣಗಾನ ಮಾಡುತ್ತಿದ್ದಾರೆ. ಇವರಿಬ್ಬರಿಂದಾಗಿ ಮಾತ್ರವಲ್ಲ, ಭಾರತ ಇಂದು ಎದುರಿಸುತ್ತಿರುವ ಎರಡು ಬಹುದೊಡ್ಡ ಸಮಸ್ಯೆಗಳಾದ ಭ್ರಷ್ಟಾಚಾರ ಮತ್ತು ಕೋಮುವಾದದ ನಿರ್ಮೂಲನೆಗಾಗಿಯೂ ಗಾಂಧೀಜಿಯ ಹೊರತಾಗಿ ಬೇರೆ ದಾರಿ ಕಾಣದಿರುವುದು ಕೂಡ ಈ ಸ್ಮರಣೆಗೆ ಕಾರಣ ಇರಬಹುದು. ಆದರೆ ಈ ರೀತಿ ಗಾಂಧಿ ಸ್ಮರಣೆಯಲ್ಲಿ ತೊಡಗಿರುವವರೆಲ್ಲರೂ ಅವರು ತೋರಿದ ಹಾದಿಯಲ್ಲಿ ಹೆಜ್ಜೆ ಹಾಕುತ್ತಿದ್ದಾರೆಯೇ?

ಗಾಂಧೀಜಿಯವರ ಅಹಿಂಸಾ ಹೋರಾಟದ ಮೊದಲ ಪ್ರಯೋಗ ಭೂಮಿ ಬಿಹಾರದ ಉತ್ತರ ತುದಿಯಲ್ಲಿರುವ ಚಂಪಾರಣ್. 'ಈ ಚಳುವಳಿ ನನಗೆ ದೇವರು, ಅಹಿಂಸೆ ಮತ್ತು ಸತ್ಯದ ದರ್ಶನ ಮಾಡಿಸಿತು' ಎಂದು ಗಾಂಧೀಜಿ ತಮ್ಮ ಆತ್ಮಕಥೆಯಲ್ಲಿ ಬರೆದುಕೊಂಡಿದ್ದಾರೆ. ಇದಕ್ಕಿಂತ ಮೊದಲು ಗಾಂಧೀಜಿಯವರಿಗೆ ಕರಾರು ಕೂಲಿ ವಲಸೆ ರದ್ದುಗೊಳಿಸಲು ನಡೆಸಿದ್ದ ಹೋರಾಟದ ಅನುಭವ ಮಾತ್ರ ಇತ್ತು. ನಂತರದ ದಿನಗಳಲ್ಲಿ ಗಳಿಸಿದ ಜನಪ್ರಿಯತೆ ಆ ದಿನಗಳಲ್ಲಿ ಅವರಿಗೆ ಇರಲಿಲ್ಲ. ಕಾಂಗ್ರೆಸ್ ಬಗ್ಗೆಯೂ ಆ ಕಾಲದಲ್ಲಿ ಅಲ್ಲಿನ ಜನರಿಗೆ ಗೊತ್ತಿಲ್ಲದಿದ್ದ ಕಾರಣ ಪಕ್ಷವನ್ನು ದೂರ ಇಟ್ಟು ಗಾಂಧೀಜಿ ಹೋರಾಟ ನಡೆಸಿದ್ದರು. ಆದ್ದರಿಂದಲೇ ಒಬ್ಬ ಸಾಮಾನ್ಯ ಗಾಂಧೀಜಿಯನ್ನು ಚಂಪಾರಣ್ ಚಳುವಳಿ ಮೂಲಕ ಕಾಣಲು ಸಾಧ್ಯ. ಚಂಪಾರಣ್ ರೈತರು ತಮ್ಮ ತೋಟಗಳ ಮುಕ್ಕಾಲು ಪಾಲು ಜಾಗದಲ್ಲಿ ಇಂಡಿಗೋ (ನೀಲಿ) ಬೆಳೆ ಬೆಳೆಯಬೇಕೆಂಬ ಕಾನೂನಿನ(ತೀನ್ ಕಾಥಿಯಾ) ಕುಣಿಕೆಯಲ್ಲಿ

ಸಿಕ್ಕಿಹಾಕಿಕೊಂಡಿದ್ದರು. ಅದನ್ನು ಜಾರಿಗೊಳಿಸಿದ್ದವರು ನೀಲಿ ತಯಾರಿಕೆಯ ಕಾರ್ಖಾನೆಗಳ ಬ್ರಿಟಿಷ್ ಒಡೆಯರು. ಜೀತದಾಳುಗಳಂತಿದ್ದ ರೈತರು ನೀಲಿ ಬೆಳೆಯಲ್ಲಿ ಹೆಚ್ಚಿನ ಆದಾಯ ಇಲ್ಲದೆ ಬಡತನದಲ್ಲಿ ನರಳುತ್ತಿದ್ದರೂ ದನಿ ಎತ್ತಲಾಗದಷ್ಟು ಅಸಹಾಯಕರಾಗಿದ್ದರು.

ಆ ಪ್ರದೇಶಕ್ಕೆ ಗಾಂಧೀಜಿ ಭೇಟಿ ನೀಡಿ ಮೊದಲು ಮಾಡಿದ ಕೆಲಸ 'ಕಾರ್ಖಾನೆ ಮಾಲೀಕರು ನನ್ನ ಶತ್ರುಗಳಲ್ಲ, ಅವರಿಗೂ ಒಳ್ಳೆಯದನ್ನು ಬಯಸುತ್ತೇನೆ' ಎಂದು ಘೋಷಿಸಿದ್ದು. ಚಳುವಳಿ ಕಾವೇರುತ್ತಿದ್ದಂತೆಯೇ ಬ್ರಿಟೀಷ್ ಸರ್ಕಾರ ತನಿಖೆಗೆ ಆಯೋಗವನ್ನು ನೇಮಿಸಿತು. ರೈತರ ಮೇಲೆ ನಡೆಸಲಾಗಿದ್ದ ದೌರ್ಜನ್ಯ, ಶೋಷಣೆಗಳಿಗೆ ಸಂಬಂಧಿಸಿದ ಪುರಾವೆಗಳು ಆಯೋಗದ ಮುಂದೆ ಬರತೊಡಗಿದ್ದವು. ಅವುಗಳನ್ನು ಬಳಸಿಕೊಂಡು ಕಾರ್ಖಾನೆ ಮಾಲೀಕರ ಮೇಲೆ ಕ್ರಮಕ್ಕೆ ಗಾಂಧೀಜಿ ಒತ್ತಾಯಿಸಬಹುದಿತ್ತು. ಹಾಗೆ ಮಾಡಿದ್ದರೆ ಬಹಳಷ್ಟು ಮಂದಿಗೆ ಕಠಿಣ ಶಿಕ್ಷೆಯೂ ಆಗುತ್ತಿತ್ತು. ಆದರೆ ಹಳೆಯದನ್ನು ಕೆದಕುವುದು ತಮಗೆ ಇಷ್ಟ ಇಲ್ಲ ಎಂದು ಪ್ರಾರಂಭದಲ್ಲಿಯೇ ಹೇಳಿದ ಗಾಂಧೀಜಿ, ಅವರ ಮನಸ್ಸಿನಲ್ಲಿದ್ದ ಭಯವನ್ನು ನಿವಾರಿಸಿದ್ದರು. ಹೋರಾಟದುದ್ದಕ್ಕೂ ಅವರ ಕಾರ್ಖಾನೆಯ ಮಾಲೀಕರ ಬಗ್ಗೆ ಒಂದೇ ಒಂದು ದೂಷಣೆಯ ಮಾತುಗಳನ್ನು ಆಡಿರಲಿಲ್ಲ. ಇದರಿಂದಾಗಿ ರೈತರು ಮಾತ್ರವಲ್ಲ, ಪ್ರಾರಂಭದಲ್ಲಿ ಗಾಂಧೀಜಿಯವರನ್ನು ಅನುಮಾನದಿಂದ ನೋಡಿದ ಕಾರ್ಖಾನೆ ಮಾಲೀಕರು ನಂತರದ ದಿನಗಳಲ್ಲಿ ಅವರ ಅಭಿಮಾನಿಗಳಾಗಿ ಬಿಟ್ಟರು. ರೈತ ವಿರೋಧಿ ಕಾನೂನು ರದ್ದಾಗಿದ್ದು ಮಾತ್ರವಲ್ಲ, ರೈತರಿಗೆ ಪರಿಹಾರವೂ ಸಿಕ್ಕಿತು. ಗೌರವಯುತವಾಗಿಯೇ ಕಾರ್ಖಾನೆ ಮಾಲೀಕರು ಊರು ಬಿಟ್ಟು ಹೋದರು.

ಮುಂದಿನ ಹೋರಾಟದುದ್ದಕ್ಕೂ ಗಾಂಧೀಜಿ ಅನುಸರಿಸಿದ್ದು ಇದೇ ಕಾರ್ಯತಂತ್ರವನ್ನು. ಸಂಧಾನದ ಮೇಜಿನಲ್ಲಿ ಎದುರಿಗೆ ಕೂತವರನ್ನು ಎಂದೂ ಅವರು ಶತ್ರುಗಳೆಂದು ಪರಿಗಣಿಸುತ್ತಿರಲಿಲ್ಲ. ಅವರನ್ನು ತನ್ನತ್ತ ಒಲಿಸಿಕೊಂಡು ಉದ್ದೇಶ ಸಾಧಿಸಿಬಿಡುತ್ತಿದ್ದರು. ಸ್ವಾತಂತ್ರ್ಯ ಹೋರಾಟದ ಕಾಲದಲ್ಲಿ ಬ್ರಿಟಿಷರ ಜೊತೆ ಮಾತುಕತೆ ನಡೆಸಿದ ನಂತರ ಅದರ ವಿವರವನ್ನೊಳಗೊಂಡ ಪತ್ರಿಕಾ ಹೇಳಿಕೆಯನ್ನು ಬ್ರಿಟಿಷ್ ಸಂಧಾನಕಾರರಿಗೆ ತೋರಿಸಿ ಸಮ್ಮತಿ ಪಡೆದು ನಂತರವಷ್ಟೇ ಮಾಧ್ಯಮಗಳಿಗೆ ನೀಡುತ್ತಿದ್ದರಂತೆ. ಇದು ಮಾತುಕತೆಯ ಪ್ರಕ್ರಿಯೆ ಮುಂದುವರಿಸಿಕೊಂಡು ಹೋಗಲು ನೆರವಾಗುತ್ತಿತ್ತು. ಅಹಿಂಸೆಯ ಮಾರ್ಗದಲ್ಲಿ ಯಶಸ್ಸು ನಿಧಾನ ಎನ್ನುವ ಅರಿವು ಅವರಿಗಿತ್ತು. ಈ ಹಿನ್ನೆಲೆಯಲ್ಲಿ ಅಣ್ಣಾ ಹಜಾರೆ ಚಳುವಳಿಯನ್ನು ನೋಡಿದಾಗ ಕಾಣುವುದೇನು? ಅಣ್ಣಾ ಹಜಾರೆ ತಂಡ ಪ್ರಾರಂಭದಲ್ಲಿಯೇ ಚುನಾಯಿತ ಸರ್ಕಾರವನ್ನು ಶತ್ರು ಸ್ಥಾನದಲ್ಲಿಟ್ಟು ಬಿಟ್ಟಿತ್ತು. ಸಂಘರ್ಷದ ಮೂಲಕವೇ ಸಂಧಾನ ಎಂಬ ಕಾರ್ಯತಂತ್ರವನ್ನು ಅವರು ಅನುಸರಿಸಿದಂತಿತ್ತು. ಆದ್ದರಿಂದಲೇ ಗಾಂಧೀಜಿ ಇಲ್ಲವೇ

ಅವರ ಅನುಯಾಯಿಗಳು ಭಾರತೀಯರನ್ನು ಗುಲಾಮರನ್ನಾಗಿ ಮಾಡಿಕೊಂಡ ಬ್ರಿಟಿಷರ ವಿರುದ್ಧ ಬಳಸದ ಭಾಷೆಯನ್ನೆಲ್ಲ ಅಣ್ಣಾ ಹಜಾರೆ ಮತ್ತು ಅವರ ಸಂಗಾತಿಗಳು ಕೇಂದ್ರ ಸರ್ಕಾರದ ಪ್ರತಿನಿಧಿಗಳ ವಿರುದ್ಧ ಬಳಸಿದ್ದಾರೆ. ಲೋಕಪಾಲ ಮಸೂದೆಯ ರಚನಾ ಸಮಿತಿಯ ಸಭೆ ಮುಗಿಸಿ ಹೊರಗೆ ಬಂದ ಅಣ್ಣಾ ಹಜಾರೆ ಸಂಗಾತಿಗಳು ಮೊದಲು ಮಾಡುತ್ತಿದ್ದ ಕೆಲಸ ತಮಗಾಗಿ ಕಾಯುತ್ತಿದ್ದ ಟಿವಿ ಚಾನೆಲ್‌ಗಳ ಮೈಕ್ ಮುಂದೆ ಸರ್ಕಾರವನ್ನು ದೂಷಿಸುವುದು. ಗಾಂಧೀಜಿಯವರು ಇದ್ದಿದ್ದರೆ ಹೀಗೆ ಮಾಡುತ್ತಿದ್ದರೇ? ಅಂದ ಹಾಗೆ, ಗಾಂಧೀಜಿ ತಮ್ಮ ಹೋರಾಟದ ಬದುಕಿನಲ್ಲಿ ಎರಡು ಬಾರಿ 21 ದಿನಗಳ ಉಪವಾಸವೂ ಸೇರಿದಂತೆ 16 ಬಾರಿ ಉಪವಾಸ ಸತ್ಯಾಗ್ರಹ ಮಾಡಿದ್ದಾರೆ. ಆದರೆ, ಅವರೆಂದೂ ಬ್ರಿಟಿಷರ ವಿರುದ್ಧ ಅದನ್ನು ಬಳಸಿಲ್ಲ. ಅವರು ಉಪವಾಸ ಸತ್ಯಾಗ್ರಹದ ಅಸ್ತ್ರವನ್ನು 'ತಮ್ಮವರ' ವಿರುದ್ಧವೇ ಪ್ರಯೋಗಿಸಿದ್ದು. ಅದು ಕೋಮುಸೌಹಾರ್ದತೆಗಾಗಿ ಇಲ್ಲವೇ ಅಸ್ಪೃಶ್ಯತೆಯ ನಿವಾರಣೆಗಾಗಿ, ರಾಜಕೀಯ ಉದ್ದೇಶಕ್ಕಲ್ಲ.

ಕಳೆದ ಹತ್ತು ವರ್ಷಗಳಲ್ಲಿ ಗಾಂಧೀಜಿಯುವರನ್ನು ಉಳಿದೆಲ್ಲ ರಾಜಕಾರಣಿಗಳಿಗಿಂತ ಹೆಚ್ಚು ನೆನಪು ಮಾಡಿಕೊಂಡದ್ದು ಗುಜರಾತ್ ಮುಖ್ಯಮಂತ್ರಿ ನರೇಂದ್ರ ಮೋದಿ. ಪ್ರತಿ ಚುನಾವಣೆಯ ಭಾಷಣಗಳಲ್ಲಿ ಅವರ ಬಾಯಿಯಿಂದ ಪುಂಖಾನುಪುಂಖವಾಗಿ ಗಾಂಧಿ ಹೆಸರು ಹೊರಬೀಳುತ್ತದೆ. ಕೆಲವು ವರ್ಷಗಳ ಹಿಂದೆ ಗುಜರಾತ್‌ನ ಪತ್ರಿಕೆಗಳಲ್ಲಿ ತನಗಿಂತ ಎತ್ತರದ ಲಾಠಿ ಹಿಡಿದ ಗಾಂಧೀಜಿಯ ಚಿತ್ರ ಹೊಂದಿದ್ದ ಸರ್ಕಾರಿ ಜಾಹೀರಾತು ಪ್ರಕಟವಾಗಿತ್ತು. ಅದರ ಶೀರ್ಷಿಕೆ 'ಲಾಠಿ' ಆಗಿತ್ತು (ಗಾಂಧಿ ಅಲ್ಲ). 'ಲಾಠಿ ರಕ್ಷಣೆ ಮತ್ತು ಸುಭದ್ರತೆಯ ಸಂಕೇತ, ದೌರ್ಜನ್ಯ ಮತ್ತು ಹಿಂಸೆಯ ಸಂಕೇತ ಅಲ್ಲ' ಎಂಬ ಅಡಿ ಬರಹ ಅದರಲ್ಲಿತ್ತು. ಇದು ಮೋದಿ ಕಲ್ಪನೆಯ ಗಾಂಧಿ. ಆದರೆ ಗುಜರಾತ್‌ನ ಪೋರಬಂದರ್‌ನ ಮೂರು ಮಾಳಿಗೆಗಳ ಮನೆ ಕೀರ್ತಿಮಂದಿರದಲ್ಲಿ ಪುತಲೀಬಾಯಿ ಜನ್ಮ ನೀಡಿದ್ದ ಗಾಂಧೀಜಿ ಬೇರೆಯೇ ಆಗಿದ್ದರು. ಒಬ್ಬ ದಾರ್ಶನಿಕ ಮಾತ್ರ ಕಾಣಬಲ್ಲ ಭವಿಷ್ಯದ ಚಿತ್ರವನ್ನು ಅವರು ತಮ್ಮ ಕೊನೆಯ ದಿನಗಳಲ್ಲಿ ಕಂಡಿದ್ದರು, ಅದು ಹೆಡೆ ಬಿಚ್ಚುತ್ತಿದ್ದ ಕೋಮುವಾದ ಎಂಬ ಘಟಸರ್ಪದ ಚಿತ್ರ.

ಬ್ರಿಟಿಷರ ವಿರುದ್ಧದ ಹೋರಾಟದ ಗುರಿ, ದಾರಿ ಮತ್ತು ಪರಿಣಾಮಗಳೆಲ್ಲದರ ಬಗ್ಗೆಯೂ ಅವರಿಗೆ ಸ್ಪಷ್ಟತೆ ಇತ್ತು. ಆದರೆ ತಮ್ಮ ಬದುಕಿನ ಕೊನೆಯ ದಿನಗಳಲ್ಲಿ ಎದುರಾದ ಹಿಂದೂ – ಮುಸ್ಲಿಮರ ನಡುವಿನ ಕೋಮುದ್ವೇಷವನ್ನು ಕಂಡು ಅವರು ಆಘಾತಕ್ಕೀಡಾಗಿದ್ದರು. ದೇಶ ವಿಭಜನೆಗೆ ಒತ್ತಾಯಿಸಿ ಮುಸ್ಲಿಂ ಲೀಗ್ 'ನೇರ ಕಾರ್ಯಾಚರಣೆ' ಗೆ ಕರೆ ಕೊಟ್ಟಾಗ ಮೊದಲು ಕೋಲ್ಕತ್ತದಲ್ಲಿ, ನಂತರ ನೌಖಾಲಿಯಲ್ಲಿ ಭುಗಿಲೆದ್ದ ಹಿಂಸಾಚಾರ ಕಂಡ ಗಾಂಧೀಜಿ ಸ್ವತಂತ್ರ ಭಾರತದ ಭವಿಷ್ಯದ ಬಗ್ಗೆ

ಆತಂಕಕ್ಕೀಡಾಗಿದ್ದರು. ಅದರ ನಂತರ ಬದುಕುವ ಆಸೆಯನ್ನೇ ಕಳೆದು ಕೊಂಡವರಂತೆ ಮಾತನಾಡುತ್ತಿದ್ದರು. ನೌಖಾಲಿಗೆ ಭೇಟಿ ನೀಡಿದ್ದಾಗ ಸ್ವಾಗತಿಸಲು ಬಂದವರನ್ನು ಉದ್ದೇಶಿಸಿ ಮಾತನಾಡಿದ್ದ ಅವರು 'ನಾನಿಲ್ಲಿ ಒಂದು ವರ್ಷ ಇಲ್ಲವೇ ಅದಕ್ಕಿಂತಲೂ ಹೆಚ್ಚಿನ ಕಾಲ ಇರಬಲ್ಲೆ. ಆದರೆ ಜನರ ಭರವಸೆ ಮತ್ತು ನಿರೀಕ್ಷೆಯನ್ನು ಈಡೇರಿಸಲು ಸಾಧ್ಯವಾಗದೆ ಹೋದರೆ ಬದುಕುಳಿಯುವುದಕ್ಕಿಂತ ಸಾವೇ ಲೇಸು' ಎಂದು ಹೇಳಿದ್ದರು. ಅದಕ್ಕಿಂತ ಮೊದಲು ಹಿಂಸೆಯ ಬೆಂಕಿಯಿಂದ ಧಗಧಗಿಸುತ್ತಿದ್ದ ನೌಖಾಲಿಗೆ ಹೊರಟಿದ್ದ ಅವರನ್ನು ತಡೆಯಲು ಬಂದವರ ಜೊತೆ ಮಾತನಾಡಿದ್ದ ಗಾಂಧೀಜಿ 'ನನ್ನನ್ನು ಈವರೆಗೆ ಬದುಕಿಸಿದ ಮತ್ತು ಆ ಬದುಕನ್ನು ಅರ್ಥಪೂರ್ಣವಾಗಿಸಿದ್ದ ಸಿದ್ಧಾಂತದ ಸತ್ವಪರೀಕ್ಷೆಗಾಗಿ ಮತ್ತು ಹೊಸ ಕಾರ್ಯತಂತ್ರದ ಶೋಧಕ್ಕಾಗಿ ಅಲ್ಲಿಗೆ ಹೊರಟಿದ್ದೇನೆ' ಎಂದು ಹೇಳಿದ್ದರು.

ಹಿಂದೂ - ಮುಸ್ಲಿಂ ಸೌಹಾರ್ದ ಅವರಿಗೆ ಇನ್ನೊಂದು ರಾಜಕೀಯ ಕಾರ್ಯಕ್ರಮವಾಗಿರಲಿಲ್ಲ, ಜೀವನವಿಧಾನವಾಗಿತ್ತು. ಇದರಿಂದಾಗಿಯೇ ಕೋಮುಸಾಮರಸ್ಯವನ್ನು ಅವರು ಕೊನೆಯ ದಿನಗಳಲ್ಲಿ ಜೀವನ್ಮರಣದ ಪ್ರಶ್ನೆಯಾಗಿಯೇ ಸ್ವೀಕರಿಸಿದ್ದರು. ಸುಮಾರು ಆರು ಸಾವಿರ ಜನ ಪ್ರಾಣ ಕಳೆದುಕೊಂಡಿದ್ದ ಕೋಲ್ಕತ್ತ ಕೋಮುಗಲಭೆಯ ನಂತರ ಪ್ರತೀಕಾರ ರೂಪದಲ್ಲಿ ನೌಖಾಲಿಯಲ್ಲಿ ಪ್ರಾರಂಭವಾದ ಕೋಮು ಸೇಡಿನ ಜ್ವಾಲೆಯನ್ನು ನಂದಿಸುವುದು ಗಾಂಧೀಜಿಯವರ ಕೈಯನ್ನೂ ಮೀರಿದ್ದು ಎಂದು ಎಲ್ಲರೂ ಭಾವಿಸಿದ್ದರು. ಕಾಂಗ್ರೆಸ್‌ನ ಉಳಿದ ನಾಯಕರೆಲ್ಲ ದೆಹಲಿಯಲ್ಲಿ ಕೂತು ಸ್ವಾತಂತ್ರ್ಯದೇವತೆಯ ಸ್ವಾಗತಕ್ಕೆ ಸಿದ್ಧತೆ ನಡೆಸುತ್ತಿದ್ದಾಗ ಗಾಂಧೀಜಿ ತಮ್ಮ ಕೆಲವು ಆಪ್ತರನ್ನಷ್ಟೇ ಜತೆಯಲ್ಲಿಟ್ಟುಕೊಂಡು ಗಲಭೆಪೀಡಿತ ನೌಖಾಲಿಯಲ್ಲಿ ಪಾದಯಾತ್ರೆ ನಡೆಸಿದ್ದರು. ಏಳು ವಾರಗಳ ಕಾಲ 116 ಮೈಲು ಕ್ರಮಿಸಿ ಅಲ್ಲಿನ 47 ಗ್ರಾಮಗಳಿಗೆ ಅವರು ಭೇಟಿ ನೀಡಿದ್ದರು. ಅಸಾಧ್ಯ ಎನಿಸಿದ್ದು ಸಾಧ್ಯವಾಗಿತ್ತು. ಮುಸ್ಲಿಮರೇ ಬಹು ಸಂಖ್ಯೆಯಲ್ಲಿರುವ ನೌಖಾಲಿಯಲ್ಲಿ ನಂತರದ ದಿನಗಳಲ್ಲಿ ಕೋಮುಗಲಭೆ ನಡೆಯಲಿಲ್ಲ.

ಆದರೆ ನೌಖಾಲಿಯ ಯಶಸ್ಸಿನ ಖುಷಿ ಬಹಳ ದಿನ ಗಾಂಧೀಜಿಯವರಲ್ಲಿ ಉಳಿಯಲಿಲ್ಲ. ಸ್ವಾತಂತ್ರ್ಯ ಸಿಕ್ಕ ಒಂದು ತಿಂಗಳ ಅವಧಿಯಲ್ಲಿ ಕೋಲ್ಕತ್ತ ಮತ್ತೆ ಕೋಮುಗಲಭೆಗೆ ಆಹುತಿಯಾಗಿತ್ತು. ಈ ಬಾರಿ ಅವರು 'ಮಾಡು ಇಲ್ಲವೇ ಮಡಿ' ಎನ್ನುವ ತೀರ್ಮಾನಕ್ಕೆ ಬಂದಿದ್ದರು. ಅದರಂತೆ ಆಮರಣಾಂತ ಉಪವಾಸ ಕೈಗೊಳ್ಳಲು ನಿರ್ಧರಿಸಿದರು. ಕೇವಲ 73 ಘಂಟೆಗಳ ಉಪವಾಸದ ಮೂಲಕವೇ ಗಾಂಧೀಜಿ ಕೋಲ್ಕತ್ತದಲ್ಲಿ ಶಾಂತಿ ಸ್ಥಾಪನೆ ಮಾಡಿದ್ದರು. ಕೋಲ್ಕತ್ತದ ಹಿಂದೂ ಮತ್ತು ಮುಸ್ಲಿಮರು ಒಟ್ಟಾಗಿ ಬಂದು 'ಇನ್ನೆಂದು ಕೋಮುಗಲಭೆಗೆ ಅವಕಾಶ ನೀಡುವುದಿಲ್ಲ, ಅಂತಹದ್ದೇನಾದರೂ ನಡೆದರೆ ಪ್ರಾಣ ಕೊಟ್ಟಾದರೂ ಅದನ್ನು ತಡೆಯುತ್ತೇವೆ'

ಎಂದು ಭರವಸೆ ನೀಡಿದ್ದರು.

ಜೀವನದ ಕೊನೆಯ ಉಪವಾಸವನ್ನೂ ಅವರು ಕೈಗೊಂಡಿದ್ದು ಕೂಡಾ ಕೋಮು ಸೌಹಾರ್ದತೆಗಾಗಿ. ಆಗ ಉಳಿದೆಲ್ಲ ಕಡೆ ಕೋಮುಗಲಭೆ ನಿಯಂತ್ರಣಕ್ಕೆ ಬರುತ್ತಿದ್ದರೂ ರಾಜಧಾನಿ ದೆಹಲಿ ಮಾತ್ರ ಹೊತ್ತಿ ಉರಿಯುತ್ತಲೇ ಇತ್ತು. ಅದೇ ವೇಳೆ ವಿಭಜನೆಯ ಕಾಲದ ಒಪ್ಪಂದದಂತೆ ತಮಗೆ ಸಂದಾಯವಾಗಬೇಕಾಗಿದ್ದ ಬಾಕಿ 55 ಕೋಟಿ ರೂಪಾಯಿ ಪಾವತಿಸುವಂತೆ ಪಾಕಿಸ್ತಾನ ಒತ್ತಾಯಿಸುತ್ತಿತ್ತು. ಆದರೆ ಕಾಶ್ಮೀರ ವಿವಾದ ಇತ್ಯರ್ಥವಾಗದೆ ಈ ಹಣವನ್ನು ಪಾವತಿ ಮಾಡಬಾರದೆಂಬ ಒತ್ತಡ ಸರ್ಕಾದರ ಮೇಲಿತ್ತು. ಇದರಿಂದಾಗಿ ದೇಶದೊಳಗೂ ಬಿಗುವಿನ ಪರಿಸ್ಥಿತಿ ನಿರ್ಮಾಣವಾಗಿ ಕೋಮುಗಲಭೆ ಸ್ಫೋಟಗೊಳ್ಳುವ ಸೂಚನೆ ಕಂಡ ಗಾಂಧೀಜಿ ಕೋಮುಸೌಹಾರ್ದಕ್ಕಾಗಿ ಉಪವಾಸ ಪ್ರಾರಂಭಿಸಿಯೇ ಬಿಟ್ಟರು. 1924ರಲ್ಲಿ ಮೊದಲ ಉಪವಾಸ ಕೈಗೊಂಡಿದ್ದಾಗ ಅವರಿಗೆ 54 ವರ್ಷ. ಕೊನೆಯ ಉಪವಾಸ ಕೈಗೊಂಡಿದ್ದಾಗ ಅವರಿಗೆ 78. ಕೋಲ್ಕತ್ತ ಉಪವಾಸದಿಂದಾಗಿ ಆಗಲೇ ಅವರ ಮೂತ್ರಪಿಂಡಗಳು ಹಾನಿಗೀಡಾಗಿದ್ದವು. ಉಪವಾಸದ ಕೊನೆಯ ದಿನಗಳಲ್ಲಿ ಅವರಿಗೆ ಚಾಪೆ ಬಿಟ್ಟು ಏಳಲಾಗುತ್ತಿರಲಿಲ್ಲ, ಮಾತು ನಿಂತು ಹೋಗಿತ್ತು, ವೈದ್ಯರು ಕೈಚೆಲ್ಲಿ ಬಿಟ್ಟಿದ್ದರು. ಉಳಿದದ್ದು ಯಾವುದನ್ನೂ ಲೆಕ್ಕಿಸದೆ ಗಾಂಧೀಜಿ ಸಾಯಲು ಸಿದ್ಧರಾಗಿದ್ದರು. 121 ಘಂಟೆ 30 ನಿಮಿಷಗಳ ಅವಧಿಯ ಉಪವಾಸದ ನಂತರ ಸರ್ಕಾರ ಮತ್ತು ಜನತೆ ಮಣಿಯಿತು, ಅವರು ಸಾವನ್ನು ಗೆದ್ದಿದ್ದರು.

ಆದರೆ ಅದೇ ದಿನ, ಇನ್ನೊಂದು ಕಡೆಯಿಂದ ಸಾವು ಅವರ ಬೆನ್ನಟ್ಟಿಕೊಂಡು ಬರುತ್ತಿತ್ತು. ನಾಥುರಾಮ್ ಗೋಡ್ಸೆ ಮತ್ತು ನಾರಾಯಣ ಅಪ್ಟೆ ಮುಂಬೈನ ವೀರ್ ಸಾವರ್ಕರ್ ಮನೆಯಿಂದ ಬೀಳ್ಕೊಂಡು ಮುಂಬೈ – ದೆಹಲಿ ವಿಮಾನ ಹತ್ತಿದ್ದರು. ಸರಿಯಾಗಿ ಹದಿಮೂರು ದಿನಗಳ ನಂತರ ಗೋಡ್ಸೆ ಪಿಸ್ತೂಲಿನ ಗುಂಡು ಗಾಂಧೀಜಿ ಎದೆ ಸೀಳಿತ್ತು. ಗಾಂಧೀಜಿಯನ್ನು ಬಲಿ ತೆಗೆದುಕೊಂಡ ಒಬ್ಬ ಮತಾಂಧನ ಗುಂಡು, ಸಾವಿಗೆ ನೆಪ ಅಷ್ಟೆ. ದೇಶ ವಿಭಜನೆಯಾದಾಗಲೇ ಅವರು ಅರ್ಧ ಸತ್ತಿದ್ದರು, ಉಳಿದರ್ಧ ಜೀವವನ್ನು ಸ್ವಾತಂತ್ರ್ಯಾನಂತರ ಭುಗಿಲೆದ್ದ ಕೋಮುಗಲಭೆ ಬಲಿ ತೆಗೆದುಕೊಂಡು ಬಿಟ್ಟಿತ್ತು. ಅದರ ನಂತರ ನೂರಾರು ಬಾರಿ ಗಾಂಧೀಜಿ ಸತ್ತಿದ್ದಾರೆ. 2002ರ ಫೆಬ್ರವರಿ – ಮಾರ್ಚ್ ತಿಂಗಳಲ್ಲಿ ತನ್ನ ಹುಟ್ಟೂರಾದ ಗುಜರಾತ್‌ನಲ್ಲಿಯೂ ಅವರು ಸತ್ತಿದ್ದರು. ಆ ಹೊತ್ತಿನಲ್ಲಿ ಗಾಂಧೀಜಿ ಅಲ್ಲಿದ್ದರೆ ಏನು ಮಾಡುತ್ತಿದ್ದರು? ಆಗ ಸುಮ್ಮನಿದ್ದು, ಒಂಬತ್ತು ವರ್ಷಗಳ ನಂತರ ಹವಾ ನಿಯಂತ್ರಿತ ಸಭಾಂಗಣದಲ್ಲಿ ಮೂರು ದಿನಗಳ ಉಪವಾಸ ಮಾಡುತ್ತಿದ್ದರೇ? ಹಾಗಿದ್ದರೆ ಗಾಂಧೀಜಿಯಿಂದ ನಾವು ಕಲಿತದ್ದೇನು?

ಸಾಭಾರ : ಪ್ರಜಾವಾಣಿ

ಜಮನಾಲಾಲ್ ಬಜಾಜ್

– ವಿನೋಬಾ

(ಜಮನಾಲಾಲ್ ಬಜಾಜ್ ತಮ್ಮ ಎಲ್ಲ ಶ್ರೀಮಂತಿಕೆಯನ್ನು ಮಹಾತ್ಮಾ ಗಾಂಧೀಜಿಯವರ ಮೂಲಕ ರಾಷ್ಟ್ರಕ್ಕೆ ಸಮರ್ಪಿಸಿ "ಧರ್ಮದರ್ಶಿತ್ವ" ದ ವಿಚಾರವು ಸಾಕಾರವಾಗುವಂತೆ ಮಾಡಿದ ಮಹನೀಯರು. ಇಂದಿನ ಕೈಗಾರಿಕೋದ್ಯಮಿಗಳಿಗೆ ಮತ್ತು ಬಂಡವಾಳಶಾಹಿಗಳಿಗೆ ಅವರ ಜೀವನವು ಆದರ್ಶವಾಗಿದೆ. ಇಲ್ಲಿ ಅವರ ಜೀವನದ ಇಣುಕು ನೋಟ ಇದೆ. – ಸಂ)

ಸನ್ 1942ರ ಫೆಬ್ರವರಿ 11ನೇ ತಾರೀಖು ಜಮನಾಲಾಲ್ ತೀರಿಕೊಂಡರು. ಅವರು ಐದನೇ ಮಗನಾಗಿ ಬಾಪೂ ಜೊತೆ ಪೂರ್ಣವಾಗಿ ಸೇರಿಕೊಂಡಿದ್ದರು. ಬಾಪೂರ ಸ್ನೇಹಿತರಬಳಗ ಮತ್ತು ಅವರ ಕುಟುಂಬ ಇವುಗಳ ಮಧ್ಯೆ ಯಾವ ಭೇದವೂ ಇರಲಿಲ್ಲ. ದೇವದಾಸನ ಮೇಲೆ ಇದ್ದ ಪ್ರೇಮದಷ್ಟೇ ಪ್ರೇಮ ಜಮನಾಲಾಲರ ಮೇಲೂ ಇಟ್ಟಿದ್ದರು. ಹೀಗೆ ಎಲ್ಲಿ ಪ್ರೇಮಕ್ಷೇತ್ರ ಮತ್ತು ಕರ್ಮಕ್ಷೇತ್ರ ಒಂದಾಗಿ ಬಿಡುತ್ತದೋ ಅಲ್ಲಿ ಧರ್ಮಕ್ಷೇತ್ರ ಉದಯಿಸುತ್ತದೆ.

ಜಮನಾಲಾಲ್‌ರೊಂದಿಗೆ ಇದ್ದ ನನ್ನ ಸಂಬಂಧವನ್ನು ಶಬ್ದಗಳಲ್ಲಿ ವರ್ಣಿಸಲು ಸಾಧ್ಯವಾಗಲಾರದು. ನಾಲ್ಕು ಕುಟುಂಬಗಳೊಂದಿಗೆ ನನ್ನ ಪರಿಚಯವಿದೆ. ಒಂದು ಮಹಾತ್ಮಾ ಗಾಂಧಿಯವರದು, ಎರಡನೆಯದು ಜಮನಾಲಾಲ್‌ಜಿಯವರದು, ಮೂರನೆಯದು ಅಣ್ಣಾ ಸಾಹೇಬ್ ದಾಸ್ತಾನೆಯವರದು ಮತ್ತು ನಾಲ್ಕನೆಯದು ರಮಾದೇವಿ ಚೌಧರಿಯವರದು. ಈ ನಾಲ್ಕು ಕುಟುಂಬಗಳಲ್ಲದೆ ಬೇರೆ ಇನ್ನು ಯಾವುದೇ ಕುಟುಂಬದ ಜೊತೆ ನನ್ನ ಪರಿಚಯವಿಲ್ಲ.

ಜಮನಾಲಾಲ್‌ಜಿಯವರ ತೀವ್ರ ಅಪೇಕ್ಷೆಯ ಮೇರೆಗೆ ಬಾಪು ತಮ್ಮ ಸತ್ಯಾಗ್ರಹ ಆಶ್ರಮದ ಒಂದು ಶಾಖೆಯನ್ನು ವರ್ಧಾದಲ್ಲಿ ಪ್ರಾರಂಭಿಸಲು ನಿಶ್ಚಯಿಸಿದರು ಮತ್ತು ಅದರ ಸಂಚಾಲನಕ್ಕಾಗಿ ನಾನು ಇಲ್ಲಿಗೆ ಬರಬೇಕೆಂದು ಆದೇಶ ಕೊಟ್ಟರು. ನಾನು ನನ್ನ ಕೆಲ ಸಂಗಡಿಗರು ಮತ್ತು ವಿದ್ಯಾರ್ಥಿಗಳ ಜೊತೆ. 8–4–1921ರಂದು ಬಂದೆ ಮತ್ತು ಅಂದಿನಿಂದ ಇಲ್ಲಿ ಆಶ್ರಮ ಪ್ರಾರಂಭವಾಯಿತು.

ಬಾಪೂ ಇಲ್ಲಿ ವರ್ಧಾಕ್ಕೆ ಬಂದು 15ವರ್ಷ ಇದ್ದರು. ಅವರು ಇಲ್ಲಿಗೆ ಬರುವಂತೆ ಮಾಡಿದ ಶ್ರೇಯಸ್ಸು ಜಮನಾಲಾಲರಿಗೇ ಸಲ್ಲಬೇಕು. ಎಲ್ಲೆಲ್ಲಿಂದ ಪವಿತ್ರತೆಯನ್ನು ವರ್ಧಾಕ್ಕೆ ತರಲು ಸಾಧ್ಯವೋ ಅಲ್ಲಲ್ಲಿಂದ ಜಮನಾಲಾಲ ಅದನ್ನು ತಂದರು. ಅವರು ಭಗೀರಥನಂತೆ ಇಲ್ಲಿಗೆ ಗಂಗೆ ತಂದರು ಮತ್ತು ವರ್ಧಾವನ್ನು

ಒಂದು ಪುಣ್ಯಕ್ಷೇತ್ರವನ್ನಾಗಿ ಮಾಡಿದರು. ಇಲ್ಲಿ ಏನು ಅನೇಕ ಸಂಸ್ಥೆಗಳು ಕಾಣುತ್ತಿವೆಯೋ ಅವೆಲ್ಲವು ಜಮನಾಲಾಲರ ಕೃತಿಯೇ ಆಗಿದೆ. ಬಾಪೂ ವಿಚಾರ ಮಾಡಿದ್ದನ್ನು ಜಮನಾಲಾಲರು ಜಾರಿಗೆ ತರುತ್ತಿದ್ದರು. ಹೀಗಿತ್ತು ಅವರ ಸಂಬಂಧ. ಅವರಿಬ್ಬರೂ ಜಾತಿ, ಧರ್ಮ ಮುಂತಾದ ಯಾವುದೇ ಪ್ರಕಾರದ ಭೇದ ಇಟ್ಟುಕೊಳ್ಳದೆ ಮನುಷ್ಯ ಮಾತ್ರ ಒಂದೇ ಎಂದು ಭಾವಿಸಿ ಸೇವೆ ಮಾಡಿದರು. ಬಡವರೊಂದಿಗೆ ಏಕರೂಪ ಆಗುವ ನಿರಂತರ ಪ್ರಯತ್ನ ಮಾಡಿದರು.

ನಾನು ಇಂದು ಜನಮಾಲಾಲರ ಕೆಲವು ಪತ್ರಗಳನ್ನು ನೋಡುತ್ತಿದ್ದೆ. ಅವರು ತಮ್ಮ ದಿನಚರಿಯಲ್ಲಿ ಹೀಗೆ ಬರೆದಿದ್ದಾರೆ, "ನಮಗೆ ಗಾಂಧೀಜಿಯವರ ಉತ್ತಮ ಮಾರ್ಗದರ್ಶನ ದೊರೆತಿದೆ. ಅವರು ಹೇಳಿದ ಮಾರ್ಗದಲ್ಲಿ ನಿಷ್ಕಾಮ ಜನಸೇವೆಯನ್ನು ಮಾಡಿದರೆ ಇದೇ ಜನ್ಮದಲ್ಲಿ ಮೋಕ್ಷ ಪಡೆಯಬಹುದು. ಈ ಜನ್ಮದಲ್ಲಿಯೇ ಮೋಕ್ಷ ದೊರೆಯದಿದ್ದಲ್ಲಿ ಚಿಂತೆಯಿಲ್ಲ. ಅನೇಕ ಜನ್ಮಗಳನ್ನು ಎತ್ತುತ್ತ ಸೇವೆ ಮಾಡುವುದರಲ್ಲಿ ಕೂಡ ಸಂತೋಷವಿದೆ. ಬುದ್ಧಿ ಶುದ್ಧವಾಗಿದ್ದರೆ ಸಾಕು".

ವರ್ಧಾದ ಸೇವೆಯನ್ನು ಅವರು ಬಹು ಪ್ರೇಮದಿಂದ ಮಾಡಿದ್ದಾರೆ. ಕೇವಲ ಸ್ವದೇಶಿ ಧರ್ಮಕ್ಕಾಗಿ ಅವರು ವರ್ಧಾವನ್ನು ಪ್ರೀತಿಸಿದರು. ತುಳಸೀ ರಾಮಾಯಣದಲ್ಲಿ ಭರತನ ಚರಿತ್ರೆ ಅವರಿಗೆ ಬಹಳ ಇಷ್ಟವಾಗಿತ್ತು. ಬಾಪೂಗೂ ಕೂಡ. ಇಲ್ಲಿ ಇರುವ 'ಭರತ – ರಾಮ' ಮಂದಿರವು ಜಮನಾಲಾಲರ ಉತ್ತಮ ಸ್ಮಾರಕವಾಗಿದೆ. 1938ರ ಮಾತು. ನಾನು ಇಲ್ಲಿಗೆ ಬಂದಾಗ ಈಗ ಇಲ್ಲಿರುವ ಮೂರ್ತಿಗಳಾವವೂ ಮೇಲೆ ಇರಲಿಲ್ಲ. ವ್ಯವಸಾಯಕ್ಕಾಗಿ ಭೂಮಿ ಇತ್ತು. ನಾನು ಅಗಿಯಲು ಪ್ರಾರಂಭಿಸಿದಾಗ ನನ್ನ ಕೈಗೆ ಮೊದಲು ಭರತ □ ರಾಮ ಮೂರ್ತಿ ಸಿಕ್ಕಿತು. ಆಶ್ಚರ್ಯದ ಮಾತೇನೆಂದರೆ ಗೀತಾ ಪ್ರವಚನದಲ್ಲಿ ವರ್ಣಿತವಾದ ರೀತಿಯಲ್ಲೇ ಈ ಭರತ – ರಾಮ ಮಾರ್ತಿಯೂ ಇತ್ತು. ಧುಲಿಯಾ ಜೈಲಿನಲ್ಲಿ ಗೀತೆಯ ಮೇಲೆ ನನ್ನ ಪ್ರವಚನಗಳಾಗುತ್ತಿದ್ದವು. ಅವುಗಳನ್ನು ಕೇಳುತ್ತಿದ್ದ ಕೇಳುಗರಲ್ಲಿ ಜಮನಾಲಾಲಜಿ ಕೂಡ ಒಬ್ಬರು. ಗೀತಾ ಪ್ರವಚನದ 12ನೇ ಅಧ್ಯಾಯದಲ್ಲಿ ಭರತ □ ರಾಮರ ಭೇಟಿಯ ವರ್ಣನೆ ಬಂದಿದೆ. "ಒಬ್ಬ ಕಾಡಿನಲ್ಲಿ ಇರುತ್ತಿದ್ದ, ಇನ್ನೊಬ್ಬ ಅಯೋಧ್ಯೆಯಲ್ಲಿ ಇರುತ್ತಿದ್ದ – ಇಬ್ಬರೂ ಪೂರ್ಣರೂಪದಲ್ಲಿ ತಪಸ್ವಿಗಳಾಗಿದ್ದರು. ಯಾರಾದರು ಕಲಾಕಾರನು ಅವರ ಚಿತ್ರವನ್ನು ಬಿಡಿಸಿದಲ್ಲಿ ಅದೆಂಥ ಪಾವನ ಚಿತ್ರವಾಗುವುದು!" 'ಗೀತಾಯಿ'ಯ ಮೊದಲ ಪ್ರಕಾಶಕ ಜಮನಾಲಾಲರೇ ಆಗಿದ್ದರು. ನಾವಿಬ್ಬರೂ ಧುಲಿಯಾ ಜೈಲಿನಲ್ಲಿದ್ದೆವು. ಆಗ "ಗೀತಾಯಿ"ಯ ಬೆಲೆಯನ್ನು ಎಷ್ಟು ಇಡಬೇಕು ಎಂಬ ಬಗ್ಗೆ ನಮ್ಮಿಬ್ಬರಲ್ಲಿ ಚರ್ಚೆ ನಡೆಯಿತು. ನಾನು ಕೇಳಿದೆ, "ಬೀಡಿಯ ಕಟ್ಟು ಎಷ್ಟು ದುಡ್ಡಿಗೆ ಸಿಗುತ್ತಿರಬಹುದು?" ಅವರು ಹೇಳಿದರು, "ಎನಗೆ ಗೊತ್ತಿಲ್ಲ". ನಾನು

ಹೇಳಿದೆ, "ವ್ಯಾಪಾರಿಯಾಗಿಯೂ ನಿಮಗೆ ಗೊತ್ತಿಲ್ಲವೆ" ಅವರು ಉತ್ತರಿಸಿದರು, "ಆ ವ್ಯಾಪಾರದಲ್ಲಿ ನಾನೆಂದಿಗೂ ತೊಡಗಿರಲಿಲ್ಲ". ಆಮೇಲೆ ವಿಚಾರಿಸಲಾಗಿ ಒಂದು ಕಟ್ಟಿಗೆ ಒಂದು ಆಣೆಯೆಂದು ಗೊತ್ತಾಯಿತು. ಆದ್ದರಿಂದ 'ಗೀತಾಯಿ' ಯ ಮೊದಲ ಆವೃತ್ತಿಯ ಪುಸ್ತಕಕ್ಕೆ ಒಂದು ಆಣೆ ಬೆಲೆ ಇಡಲಾಯಿತು.

ಆ ದಿನಗಳಲ್ಲಿ ಜಮನಾಲಾಲಜಿ ಚರಕಾಸಂಘದ ಅಧ್ಯಕ್ಷರಾಗಿದ್ದರು. ಒಂದು ಸಲ ಯಾರೋ ಒಬ್ಬರು ಅವರ ಹಣವನ್ನು ತಿಂದುಹಾಕಿದರು, ಹೀಗೇನಾದರೂ ಆದಾಗ ಅವರು ಬಾಪೂ ಬಳಿಗೆ ಹೋಗುತ್ತಿದ್ದರು ಮತ್ತು ನನ್ನ ಬಳಿಯೂ ಬರುತ್ತಿದ್ದರು. ಒಬ್ಬರು ಏನು ಹೇಳಿದರು ಎಂಬುದನ್ನು ಇನ್ನೊಬ್ಬರಿಗೆ ಹೇಳುತ್ತಿರಲಿಲ್ಲ, ಇಬ್ಬರ ಸಲಹೆ ಒಂದೇ ಆಗಿದ್ದರೆ ಯಾವ ಪ್ರಶ್ನೆಯೇ ಇಲ್ಲ. ಆದರೆ ಹೀಗಾಗದಿದ್ದರೇ ಚರ್ಚೆ ಮಾಡುತ್ತಿದ್ದರು. ಅವರು ನನ್ನ ಬಳಿ ಬಂದರು ಮತ್ತು ಹೇಳಹತ್ತಿದರು, "ಈಗ ಏನು ಮಾಡಬೇಕು?" ನಾನು ಕೇಳಿದೆ. "ಆಸ್ತಿಯು ಜಮನಾಲಾಲಜೀಯವರದೇ ಅಥವಾ ಟ್ರಸ್ಟ್‌ನದೇ?" ಅವರು ಹೇಳಿದರು, "ಟ್ರಸ್ಟಿನದು" ಕೋರ್ಟಿಗೆ ಹೋಗಬೇಕೆಂದು ನಾನು ಸಲಹೆ ಕೊಟ್ಟೆ. ಆಮೇಲೆ ಅವರು ಬಾಪೂ ಬಳಿ ಹೋದರು. ಬಾಪೂ ಹೇಳಿದರು, "ಇದನ್ನೇನು ಕೇಳುವುದು? ಕೋರ್ಟಿಗೆ ಹೋಗಲೇಬೇಕು". ಜಮನಾಲಾಲರಿಗೆ ಆಶ್ಚರ್ಯವಾಯಿತು. ಬಾಪೂ ಯಾವಾಗಲೂ "ನಾವು ದಂಡನೀಯ, ಸರ್ಕಾರದ ಸಹಾಯ ತೆಗೆದುಕೊಳ್ಳಬಾರದು" ಎಂದು ಹೇಳುತ್ತಿದ್ದರು. ಆಗಂತೂ ಇಂಗ್ಲೀಷ್ ಸರ್ಕಾರವೇ ಇತ್ತು. ಜಮನಾಲಾಲರು ಬಾಪೂರ ಸಲಹೆ ಕೇಳಿದರೂ ಅವರಿಗೆ ಸಮಾಧಾನವಾಗಲಿಲ್ಲ. ಅವರು ಪುನಃ ನನ್ನ ಬಳಿ ಬಂದು ಚರ್ಚೆಮಾಡಲಾರಂಭಿಸಿದರು. "ಬಾಪೂರ ಈ ಸಲಹೆ ಎಷ್ಟರ ಮಟ್ಟಿಗೆ ಸರಿಯಿದೆ?" ಎಂದು ನನ್ನನ್ನು ಕೇಳಿದರು. ನಾನು ಹೇಳಿದೆ, "ಈ ರೀತಿ ಹಣ ಇಡುವುದು ಎಷ್ಟರ ಮಟ್ಟಿಗೆ ಉಚಿತ? ಯಾವಾಗ ಅದರ ಜವಾಬ್ದಾರಿಯನ್ನು ತೆಗೆದುಕೊಂಡಿದೆಯೆಂದ ಮೇಲೆ ಅದರ ಪರಿಹಾರವೂ ಅದೇ ರೀತಿ ಆಗಬೇಕು".

ಜಮನಾಲಾಲರ ಬಗ್ಗೆ ನಾನು ಮಾತನಾಡುವಾಗಲೆಲ್ಲ, ಯೋಚನೆ ಮಾಡುವಾಗಲೆಲ್ಲ ಅವರು ಯಾವಾಗಲೂ ಹೇಳುತ್ತಿದ್ದ ಎರಡು ವಚನಗಳು ನನ್ನ ನೆನಪಿಗೆ ಬರುತ್ತವೆ. ಒಂದು,

"ಕಾಸು – ಕಾಸು ಸೇರಿಸಿದೆಯಲ್ಲಾ
ರತ್ನ ಕಸಕ್ಕೆ ಹೋಯಿತಲ್ಲಾ"

ಎಂಬ ಕಬೀರರ ವಾಣಿ. ಸಂಪತ್ತನ್ನು ಸೇರಿಸುತ್ತೀಯೆ. ಆದರೆ ನರದೇಹವೆಂಬ ಅಮೂಲ್ಯ ರತ್ನ ಕಸದ ತೊಟ್ಟಿಗೆ ಹೋಗುತ್ತಿದೆ! ನೀನು ಆಕಡೆಗೆ ಗಮನವೀಯುತ್ತಿಲ್ಲ, ಈ ವಾಕ್ಯದ ಪರಿಣಾಮದಿಂದ ಜಮನಾಲಾಲರಿಗೆ ಸಂಪತ್ತಿನ ಮೋಹ ಎಳ್ಳಷ್ಟೂ

ಉಳಿಯಲಿಲ್ಲ. "ನನ್ನ ಕೈಯಲ್ಲಿರುವ ಹಣ ಒಂದು ಉಪಾಧಿ. ಅದರಿಂದ ಎಷ್ಟು ಬೇಗ ಬಿಡುಗಡೆ ಹೊಂದಬಹುದೋ ಅಷ್ಟು ಒಳ್ಳೆಯದು. ಆದರೆ ಹಣವನ್ನು ಹಾಗೆಯೇ ಎಸೆದು ಬಿಟ್ಟರೆ ಬಿಡುಗಡೆ ಸಾಧ್ಯವಿಲ್ಲ. ವ್ಯರ್ಥ ದಾನವೂ ಸರಿಯಲ್ಲ. ಯೋಗ್ಯ ಮನುಷ್ಯರಿಗೆ ದಾನ ಕೊಟ್ಟಾಗ ಮಾತ್ರ ಅದರ ಉಪಯೋಗವಿದೆ. ಜಮನಾಲಾಲ್ ಹೀಗೆಯೇ ಮಾಡುತ್ತಿದ್ದರು. ಯೋಗ್ಯರನ್ನು ಹುಡುಕುತ್ತಾ ಇರುತ್ತಿದ್ದರು ಮತ್ತು ಹಣ ಕೊಡುತ್ತಾ ಇರುತ್ತಿದ್ದರು. ಹೀಗೆ ಮಾಡಿದಾಗ ಹಣ ಚರಿತಾರ್ಥವಾಗುತ್ತದೆಂದು ಅವರು ತಿಳಿದಿದ್ದರು. ದಾನ ಪಡೆದವರಿಂದಲೇ ತಮಗೆ ಉಪಕಾರವಾಯಿತೆಂದು ತಿಳಿಯುತ್ತಿದ್ದರು. ಎರಡನೆಯ ವಾಕ್ಯ ತುಕಾರಾಮರದು:

ನುಡಿದಂತೆ ನಡೆದವನ ಪಾದ ಹಿಡಿಯುವೆ ಅವನ, ನಾವು ಮಾತನಾಡಿದಂತೆಯೇ ಆಚರಣೆ ಇರಬೇಕೆಂಬ ಚಿಂತೆ ಸದಾ ಅವರದಾಗಿರುತ್ತಿತ್ತು. ಜಮನಾಲಾಲರದು ಅಸಾಧಾರಣ ವ್ಯಕ್ತಿತ್ವವೇನಲ್ಲ. ಆದರೂ ಕೂಡ ಕಳೆದ ಮೂವತ್ತು – ಮೂವತ್ತೈದು ವರ್ಷಗಳಲ್ಲಿ ಇನ್ನೋರ್ವ ಜಮನಾಲಾಲ ಹುಟ್ಟಿಬರಲಿಲ್ಲವೆಂಬುದು ಕೂಡ ಅಷ್ಟೇ ನಿಜ. ಅವರು ವ್ಯವಸಾಯ – ವಾಣಿಜ್ಯಗಳಲ್ಲಿ ಬಹಳಷ್ಟು ಕೆಲಸ ಮಾಡಿದರು. ಮಹಿಳಾಶ್ರಮ ಮುಂತಾದ ಸಂಸ್ಥೆಗಳನ್ನು ಕಟ್ಟಿದರು. ಬಾಪೂರ ಅನೇಕ ಕೆಲಸಗಳಲ್ಲಿ ಸಹಯೋಗ ಕೊಟ್ಟರು. ಕೊನೆಯ ಕೆಲಸವಾಗಿ ಅವರು ಗೋಸೇವೆಯನ್ನು ಕೈಗೆತ್ತಿಕೊಂಡರು. ಗೋಸೇವೆಯ ಸರ್ವೋತ್ತಮ ಉದಾಹರಣೆ ಕೃಷ್ಣ. ಆ ಕೃಷ್ಣನ ನಂತರ ಬೇರೆ ಯಾರಾದರೂ ಇದ್ದರೆ ಅದು ಜಮನಾಲಾಲ. ಅವರು ಗೋಸೇವೆಯೊಂದಿಗೆ ತನ್ಮಯರಾಗಿದ್ದರು. ಆ ಕೆಲಸಕ್ಕಾಗಿ ತಮ್ಮ ದೊಡ್ಡ ಮಹಲನ್ನು ಬಿಟ್ಟು ತಾವು ಒಂದು ಗುಡಿಸಲಲ್ಲಿ ಇರಲು ಪ್ರಾರಂಭಿಸಿದರು. ಮಹಾನುಭಾವರ ಸಾಲಿನಲ್ಲಿ, ಸಣ್ಣ ಸ್ವರೂಪವೇ ಇರಬಹುದು, ಜಮನಾಲಾಲರಿಗೂ ಸ್ಥಾನವಿದೆ.

ಸಾಭಾರ : "ಮೈತ್ರಿ"
ಅನು : ಸುಕೌ

ಶ್ರದ್ಧಾಂಜಲಿ

ತಮ್ಮ ದೀರ್ಘ ಕಾಲದ ಸಾಹಿತ್ಯ ಸೇವೆಯಿಂದ ಕನ್ನಡವನ್ನು ಶ್ರೀಮಂತಗೊಳಿಸಿದ ಮತ್ತು ವಿಶಿಷ್ಟ ಚಿಂತನಾ ಶೈಲಿಯಿಂದ ಕರ್ನಾಟಕದ ಮಾನಸವನ್ನು ಬೆಳಗಿಸಿ ದಿವಂಗತರಾದ ಯು.ಆರ್.ಅನಂತಮೂರ್ತಿಯವರಿಗೆ ಮತ್ತು ನಾಟ್ಯಶಾಸ್ತ್ರ ಕಲಾವಿದೆ ಮಾಯಾರಾವ್ ರವರಿಗೆ ಮತ್ತು ಯೋಗಾಶಾಸ್ತ್ರ ಪ್ರವೀಣ ಬಿ.ಕೆ.ಎಸ್.ಅಯ್ಯಂಗಾರ್ ರವರಿಗೆ ಜನಪದ ವಿಚಾರ ತನ್ನ ಹೃದಯ ಪೂರ್ವಕ ಶ್ರದ್ಧಾಂಜಲಿ ಅರ್ಪಿಸುತ್ತದೆ.

ಶ್ರೀಮಂತಿಕೆಯ ಬೆಟ್ಟ, ಬಡತನದ ಗುಂಡಿ

–ಮಹದೇವ್ ವಿದ್ರೋಹಿ

(ಲೋಕಸೇವಕರು ಮತ್ತು ಸರ್ವೋದಯ ಮಿತ್ರರಿಗಾಗಿ ಆಯೋಜಿಸಲಾಗಿದ್ದ ಶಿಕ್ಷಣ ಶಿಬಿರದಲ್ಲಿ ಮಾಡಿದ ಉದ್ಘಾಟನಾ ಭಾಷಣ. ಮಹದೇವ್ ವಿದ್ರೋಹಿ ಸರ್ವ ಸೇವಾ ಸಂಘದ ಅಧ್ಯಕ್ಷರು – ಸಂಪಾದಕ)

ಈ ಅಧಿವೇಶನದ ಉದ್ಘಾಟನೆಯ ಸಂದರ್ಭದಲ್ಲಿ ರಾಷ್ಟ್ರೀಯ ಪರಿಸ್ಥಿತಿ ಮತ್ತು ನಮ್ಮ ಪಾತ್ರ ಎಂಬ ವಿಷಯದ ಬಗ್ಗೆ ಮಾತನಾಡಬೇಕೆಂಬ ಹೊಣೆ ಹೊರಿಸಲಾಗಿದೆ.

ಇವತ್ತಿನ ಪರಿಸ್ಥಿತಿಯ ಬಗ್ಗೆ ವಿಮರ್ಶೆ ಮಾಡಿದಾಗಲೆಲ್ಲ ಗಾಂಧೀ ಮತ್ತು ಗಾಂಧೀಯವರ ಹಿಂದ್ ಸ್ವರಾಜ್‌ದ ವಾಕ್ಯಗಳನ್ನು ಮರೆಯಲಾಗುವುದಿಲ್ಲ.

ತಮ್ಮ ಹಿಂದ್ ಸ್ವರಾಜ್‌ದಲ್ಲಿ ಗಾಂಧೀ ರೈಲಿನ ವಿರೋಧ ಮಾಡಿದರು. ಕೆಲವು ಜನ ಯಾರಿಗೆ ಈ ವಿರೋಧದಲ್ಲಿರುವ ರಹಸ್ಯ ಗೊತ್ತಿರಲಿಲ್ಲವೊ ಅವರು ಸ್ವಾಭಾವಿಕವಾಗಿ ಒಂದು ಪ್ರಶ್ನೆ ಕೇಳುತ್ತಾರೆ. ಗಾಂಧೀ ಸ್ವತಃ ರೈಲುಯಾತ್ರೆಯನ್ನು ದೇಶ ಮತ್ತು ವಿದೇಶದಲ್ಲಿ ಮಾಡಿದರು. ಅಂಥವರು ರೈಲಿನ ವಿರೋಧಿ ಏಕಿದ್ದರು? ಅವರ ವಿಚಾರ ವಿರೋಧಾತ್ಮಕ ಏಕೆ? ವಿಶ್ವ ವಿಖ್ಯಾತ ಅರ್ಥಶಾಸ್ತ್ರಜ್ಞ ಅಮರ್ಥ್ಯಸೇನ್ ಕೂಡ ತಮ್ಮ ಪುಸ್ತಕದಲ್ಲಿ ರೈಲಿನ ಮಹಾತ್ಮ್ಯದ ಮೇಲೆ ಬೆಳಕು ಚೆಲ್ಲಿದ್ದಾರೆ. ಈ ಸಂಬಂಧದಲ್ಲಿ ಅವರು ಹೀಗೆ ಬರೆದಿದ್ದಾರೆ. ೧೯೪೦ರ ದಶಕದಲ್ಲಿ ಪಶ್ಚಿಮ ಬಂಗಾಳದಲ್ಲಿ ಆದ ಒಂದು ಬರಗಾಲದ ಬಗ್ಗೆ ಚರ್ಚೆ ಮಾಡಿದ್ದಾರೆ. ಸುಮಾರು ಹತ್ತು ಲಕ್ಷ ಜನರು ಬರಗಾಲಕ್ಕೆ ತುತ್ತಾಗಿದ್ದರು. ಆ ವರ್ಷ ಸುಮಾರು ಶೇ.೨೫ರಷ್ಟು ಕೃಷಿ ಉತ್ಪಾದನೆ ಕಡಿಮೆಯಾಗಿತ್ತು. ಆ ಕಾರಣವಾಗಿ ಇಷ್ಟು ದೊಡ್ಡ ಸಂಖ್ಯೆಯ ಜನರು ಸಾಯುವ ಸ್ಥಿತಿ ತಲುಪಿದ್ದರು. ಇಂಗ್ಲೀಷರು ರೈಲ್ವೇಯನ್ನು ಬಂದರುಗಳಿಗೆ ಜೋಡಿಸಲು ಕಾರಣ ಭಾರತದಿಂದ ದೊಡ್ಡ ಪ್ರಮಾಣದಲ್ಲಿ ಕಚ್ಚಪದಾರ್ಥವನ್ನು ತಮ್ಮ ದೇಶಕ್ಕೆ ತೆಗೆದುಕೊಂಡು ಹೋಗಲೆಂದು. ಗಾಂಧೀಯವರು ರೈಲನ್ನು ಏಕೆ ವಿರೋಧಮಾಡಿದ್ದರೆಂಬ ಮರ್ಮ ಇದರಿಂದ ತಿಳಿಯುತ್ತದೆ. ಆದ್ದರಿಂದ ಹಿಂದ್ ಸ್ವರಾಜ್ ಜಗತ್ತಿನ ಒಂದು ಹೊಸ ಸಂಸ್ಕೃತಿಯ ಹೆಸರಾಗಿದೆ. ಮನಸೋಇಚ್ಛೆ ತಿನ್ನು ಮತ್ತು ಆಜ್ಮೋಲದಿಂದ ಜೀರ್ಣಿಸಿಕೋ ಎಂಬುದು ಇಂದಿನ ಸಂಸ್ಕೃತಿಯಾಗಿದೆ. ಅದಕ್ಕೆ ವಿರುದ್ಧ ಹಿಂದ್‌ಸ್ವರಾಜ್‌ದಲ್ಲಿದೆ. ಈ ಪುಸ್ತಕವನ್ನು ಪದೇ ಪದೇ ಓದುವ

ಅಗತ್ಯವಿದೆ.

ಈಗ ರೈಲ್ವೇ ಬಜೆಟ್ ಬಂದಿದೆ. ಅಹಮದಾಬಾದ್‌ನಿಂದ ಮುಂಬಯಿವರೆಗೆ ಬುಲೆಟ್ ರೈಲು ಓಡಿಸುವ ಯೋಜನೆಯಿದೆ. ೪೯೩ ಕಿಲೋಮೀಟರ್ ಉದ್ದನೆಯ ಈ ರೈಲ್ವೇ ಯೋಜನೆಗಾಗಿ ಪ್ರತಿ ಕಿಲೋಮೀಟರ್‌ಗೆ ೧೨೨ ಕೋಟಿ ರೂಪಾಯಿಯಂತೆ ಖರ್ಚಾಗುವುದು. ಇದು ಭೂಮಿ ಮತ್ತು ವಿದ್ಯುಚ್ಛಕ್ತಿಗಾಗಿ ಆಗುವ ಖರ್ಚಿನ ಹೊರತಾಗಿದೆ. ಈ ಕೆಲಸವನ್ನು ಜಪಾನಿನ ಕಂಪನಿಗೆ ಕೊಡಲಾಗುವುದು. ವಿಮಾನಕ್ಕಿಂತ ಹೆಚ್ಚಿಗೆ ಖರ್ಚಾಗುತ್ತೆಂದು ಅಂದಾಜಿಸಲಾಗಿದೆ. ಯಾವ ಪ್ರದೇಶಕ್ಕೆ ಇದುವರೆಗೆ ರೈಲ್ವೆಯ ಸಂಪರ್ಕ ಉಂಟಾಗಿಲ್ಲವೊ ಅಲ್ಲಿಗೆ ರೈಲು ಹಾಕುವುದು ಅಗತ್ಯವೊ ಅಥವಾ ಬುಲೆಟ್ ರೈಲು ಓಡಿಸುವುದೊ! ಇದೇ ತರಹ ಉದ್ಯೋಗ ಪ್ರಾರಂಭಿಸಲು ಪರಿಸರ ಸಂಬಂಧವಾದ ಪ್ರಮಾಣ ಪತ್ರವನ್ನು ಆನ್‌ಲೈನ್ ಒಪ್ಪಿಗೆ ಕೊಡುವ ಪದ್ಧತಿಯಲ್ಲಿ ಈಗ ತಕ್ಷಣ ಕೊಡಲಾಗುವುದು. ಅದರಿಂದಾಗಿ ಪರಿಸರಕ್ಕೆ ತುಂಬಾ ಹಾನಿಯುಂಟಾಗುವುದು.

ಗುಜರಾತ್‌ನಲ್ಲಿ ಸಾಬರಮತಿ ನದಿಯ ಎರಡೂ ಕಡೆಗೆ ಕೈಗಾರಿಕೆ ಬಂದಿವೆ. ನದಿಯ ಬಳಿ ಹೋಗಲು ಹತ್ತು ರುಪಾಯಿ ಕೊಡಬೇಕಾಗುತ್ತದೆ. ಪಶುಗಳು ನದಿಯ ನೀರನ್ನು ಕುಡಿಯಲು ಆಗುವುದಿಲ್ಲ. ನದಿಯ ಬಳಿ ಗುಡಿಸಲು ಹಾಕಿಕೊಂಡು ಇರುವ ಹಾಗಿಲ್ಲ. ಎಂಥ ಸಮಾಜವನ್ನು ನಿರ್ಮಾಣ ಮಾಡ ಬಯಸುತ್ತೇವೆ. ಹಣ ಸಂಪಾದಿಸಲು ಸ್ಪರ್ಧೆಯ ಕಾರಣದಿಂದ ಗುಜರಾತಿನ ಅನೇಕ ಹಳ್ಳಿಗಳಲ್ಲಿ ಯುವಕರೇ ಇಲ್ಲ ಕೇವಲ ವೃದ್ಧ ತಂದೆ ತಾಯಿಗಳಿದ್ದಾರೆ. ಒಂದು ವೇಳೆ ಅವರ ಮೃತ್ಯುವಾದರೆ ಅವರ ಶವ ಸಂಸ್ಕಾರಕ್ಕಾಗಿ ಪಕ್ಕದ ಹಳ್ಳಿಯಿಂದ ಜನರು ಬರಬೇಕಾಗುತ್ತದೆ. ಬಾಂಗ್ಲಾದೇಶ ಮತ್ತು ಭಾರತದ ಗಡಿಯಲ್ಲಿ ಹಣ ಕೊಟ್ಟು ಪರಸ್ಪರ ದೇಶದೊಳಗೆ ಹೋಗುತ್ತಾರೆ. ಸುಳ್ಳು ದಾಖಲೆಗಳ ಆಧಾರದ ಮೇಲೆ ಜನರನ್ನು ವಿದೇಶಕ್ಕೆ ಕಳುಹಿಸುವ ಕಂಪನಿಗಳು ಬಹಳಷ್ಟು ಸಂಪಾದನೆ ಮಾಡುತ್ತಿವೆ. ಎ.ಎಮ್.ತಾರಕುಂಡೆಯವರ ಪ್ರಕಾರ ಗಡಿಕಾಯುವ ಸೈನಿಕರು ೧೦೦ – ೧೫೦ ರೂ ತೆಗೆದುಕೊಂಡು ಗಡಿ ದಾಟಿಸುತ್ತಾರೆ. ಕೆಲವು ದಿನಗಳ ಹಿಂದೆ ಪಶ್ಚಿಮ ಬಂಗಾಳಕ್ಕೆ ಹೋಗಿದ್ದೆ. ಆದಿವಾಸಿ ಮಹಿಳೆಯರೊಂದಿಗೆ ಇರುವ ಮತ್ತು ಸಂವಾದ ನಡೆಸುವ ಅವಕಾಶ ಸಿಕ್ಕಿತ್ತು. ಟಾಟಾನ ಹೆಸರು ಕೇಳಿದ್ದೀರ ಎಂದು ನಾನು ಕೇಳಿದೆ. ಹೆಚ್ಚಿನ ಜನರಿಗೆ ಅವರ ಹೆಸರು ಗೊತ್ತಿತ್ತು. Fair & Lovely ಕ್ರೀಮ್ ಬಗ್ಗೆ ಕೂಡ ಮಹಿಳೆಯರಿಗೆ ಗೊತ್ತಿತ್ತು. ರಿಲಾಯನ್ಸ್‌ನ ಹೆಸರು ಕಡಿಮೆ ಮಹಿಳೆಯರಿಗೆ ಗೊತ್ತಿತ್ತು. ನಿಮ್ಮ ಮನೆಯಲ್ಲಿ ಪ್ರತಿ ವ್ಯಕ್ತಿಯ ತಿಂಗಳ ಸಂಪಾದನೆ ಎಷ್ಟೆಂದು ಕೇಳಿದೆ. ಹೆಚ್ಚೆಂದರೆ ತಿಂಗಳಿಗೆ ೬೦೦ ರೂಪಾಯಿ ಎಂದು ಹೇಳಿದರು. ಕಲೆಕ್ಟರ್‌ನ ಹೆಸರು ಕೇಳಿದ್ದೀರ ಎಂದು ಕೇಳಿದೆ ಅವನ ಸಂಬಳ ಎಷ್ಟೆಂದು ಕೇಳಿದೆ. ಆಗ ಮಹಿಳೆಯರು ಬಹಳಷ್ಟು ಯೋಚನೆ ಮಾಡಿ ೧,೫೦೦ ಎಂದು ಹೇಳಿದರು. ಈ ಆರ್ಥಿಕ ಅಸಮಾನತೆ ನಮ್ಮ ದೇಶದಲ್ಲಿದೆ.

ಆರ್ಥಿಕ ಅಸಮಾನತೆಯ ಸಂಬಂಧವಾಗಿ ಅನೇಕ ಸಂಗತಿಗಳನ್ನು ಕೂಡಿ ಹಾಕಿದೆ. ಅವುಗಳ ಆಧಾರದ ಮೇಲೆ ಅಸಮಾನತೆಯ ನಿಜ ರೂಪವನ್ನು ತಿಳಿಯಬಹುದು. ಯೋಜನಾ ಆಯೋಗದ ಲೆಕ್ಕಾಚಾರದ ಪ್ರಕಾರ ನಗರದಲ್ಲಿ ವಾಸಿಸುವುದಕ್ಕಿಂತ ಹಳ್ಳಿಗಳಲ್ಲಿ ವಾಸಿಸುವ ಯಾವುದೇ ಪರಿವಾರದ ದಿನದ ಆದಾಯ ೨೬ ರೂಪಾಯಿ. ನಗರದಲ್ಲಿ ಇರುವ ಪರಿವಾರದ ದಿನದ ಆದಾಯ ೨೮ ರೂಪಾಯಿ. ಗುಜರಾತ್‌ನಲ್ಲಿ ಇನ್ನೂ ಆಶ್ಚರ್ಯದ ಸಂಗತಿಯಿದೆ. ಯಾರ ದಿನದ ಆದಾಯ ೧೬ ರೂಪಾಯಿಗಳಿಗಿಂತ ಕಡಿಮೆ ಇದೆಯೋ ಅವರನ್ನೇ ಬಡವರೆಂದು ಮಾನ್ಯ ಮಾಡುತ್ತದೆ. ಭಾರತದಲ್ಲಿ ಸಾಮಾನ್ಯವಾಗಿ ಒಂದು ಕುಟುಂಬದಲ್ಲಿ ಐದು ಜನರೆಂದು ತಿಳಿಯಲಾಗಿದೆ. ಹಳ್ಳಿಯಲ್ಲಿರುವ ಕುಟುಂಬದ ದಿನದ ಆದಾಯ ೨೬ ರೂಪಾಯಿಯೆಂದು ಲೆಕ್ಕ ಹಾಕಿದ್ದಲ್ಲಿ ಐದು ವ್ಯಕ್ತಿಗಳಿಗೆ ಹಂಚಿದಾಗ ಪ್ರತಿ ವ್ಯಕ್ತಿಗೆ ೫ ರೂ ೨೦ ಪೈಸೆ ಬರುತ್ತದೆ. ದಕ್ಷಿಣ ಭಾರತದಲ್ಲಿ ಸನ್‌ಟಿವಿ ಹೆಸರಿನ ಕಂಪನಿಯಿದೆ. ಕಲಾನಿಧಿಮಾರನ್ ಇದರ ಪ್ರಬಂಧ ನಿರ್ದೇಶಕರಾಗಿದ್ದಾರೆ. ಅವರ ಪತ್ನಿ ಕಾವೇರಿ ಮಾರನ್ ಇದರ ನಿರ್ದೇಶಕರು. ಈ ಇಬ್ಬರ ಒಟ್ಟು ವಾರ್ಷಿಕ ವೇತನ ೨೮ ಕೋಟಿ ೮ ಲಕ್ಷ ರೂಪಾಯಿಗಳು. ಈ ಮೊತ್ತ ಎಷ್ಟು ಎಂದು ಅಂದಾಜು ಮಾಡುವುದು ಜನಸಾಮಾನ್ಯರಿಗೆ ಕಷ್ಟ. ಆದ್ದರಿಂದ ವಿಭಾಜಿತ ರೂಪವನ್ನು ಇಲ್ಲಿ ಪ್ರಸ್ತುತ ಪಡಿಸಲಾಗುತ್ತಿದೆ. ಕಲಾನಿಧಿಮಾರನ್ ಮತ್ತು ಕಾವೇರಿಮಾರನ್‌ರ ತಿಂಗಳ ವೇತನ ಹತ್ತು ಕೋಟಿ ಎಪ್ಪತ್ಮೂರು ಲಕ್ಷ ರೂಪಾಯಿಗಳು : ದಿನದ ಸಂಬಳ ೩೫,೨೮,೭೬೭, ಪ್ರತಿ ಗಂಟೆಗೆ ೦೧,೪೭,೦೩೧, ಪ್ರತಿ ನಿಮಿಷಕ್ಕೆ ೦೨,೪೫೦, ಪ್ರತಿ ಸೆಕೆಂಡ್‌ಗೆ ೪೦,೮೪.

ನೌಕರಿ ಮಾಡುವ ಯಾವುದೇ ವ್ಯಕ್ತಿ ತಿಂಗಳ ಕೊನೆಗೆ ಅಥವಾ ಆರಂಭದಲ್ಲಿ ಸಂಬಳ ಪಡೆದಾದ ಮೇಲೆ ಅವನು ಜೇಬಿನಲ್ಲಿ ಇಟ್ಟುಕೊಂಡು ಮನೆಗೆ ಹಿಂದಿರುಗುತ್ತಾನೆ. ಒಂದು ವೇಳೆ ಕಲಾನಿಧಿ ಮಾರನ್ ಮತ್ತು ಕಾವೇರಿ ಮಾರನ್‌ಗೆ ಒಂದು ವರ್ಷದ ವೇತನವನ್ನು ಒಟ್ಟಿಗೆ ಕೊಟ್ಟರೆ ಅದು ಅವರ ಜೇಬಿನಲ್ಲಿ ಹಿಡಿಸುವುದೇ ಇಲ್ಲವೇ ಎಂದು ಆಲೋಚಿಸುತ್ತಿದ್ದೆ. ಅವರ ವಾರ್ಷಿಕ ವೇತನವನ್ನು ನೂರು ರೂಪಾಯಿಗಳ ನೋಟಿನಲ್ಲಿ ಕೊಟ್ಟಲ್ಲಿ ಅದರ ತೂಕ ಎಂಟು ಸಾವಿರ ಕಿಲೋಗ್ರಾಂಗಿಂತಲೂ ಹೆಚ್ಚಾಗುತ್ತದೆ. ಅದನ್ನು ತೆಗೆದುಕೊಂಡು ಹೋಗುವುದಕ್ಕೆ ಟಾಟಾ ಕಂಪನಿಯ ೪೦೭ ವಾಹನ ತರಬೇಕಾಗುವುದು. ಯಾವ ದೇಶದಲ್ಲಿ ಒಂದು ಸೆಕೆಂಡಿಗೆ ೪೦.೮೪ ರೂ ವೇತನವಿದೆಯೋ ಆ ದೇಶದ ಸರ್ವ ಸಾಮಾನ್ಯ ಮನುಷ್ಯನ ವೇತನದೊಂದಿಗೆ ಹೋಲಿಕೆ ಮಾಡಿದಲ್ಲಿ ಹೃದಯಾಘಾತವಾಗುತ್ತದೆ. ೨೦೧೪ರಲ್ಲಿ ಭಾರತ ಸರ್ಕಾರ ಅಸಂಘಟಿತ ಕ್ಷೇತ್ರದಲ್ಲಿ ಕೆಲಸ ಮಾಡುವವರ ಸ್ಥಿತಿ ಅಧ್ಯಯನ ಮಾಡುವುದಕ್ಕಾಗಿ ಅರ್ಜುನ್ ಸೇನಾ ಗುಪ್ತಾರವರ ಅಧ್ಯಕ್ಷತೆಯಲ್ಲಿ ಒಂದು ಆಯೋಗ ರಚಿಸಲಾಗಿತ್ತು. ಆ ಆಯೋಗ ೨೦೦೬ ಮೇ ೧೪ನೇ ತಾರೀಖು ಭಾರತ ಸರ್ಕಾರಕ್ಕೆ ವರದಿ ಸಲ್ಲಿಸಿತು. ಆ ವರದಿ ಪ್ರಕಾರ ಈ ದೇಶದ ಸುಮಾರು

ಶೇಕಡ ೭೮ರಷ್ಟು ಕೆಲಸಗಾರರ ದಿನದ ಆದಾಯ ೯ರಿಂದ ೨೦ ರೂಪಾಯಿ ಮಧ್ಯ ಇದೆ. ಆದ್ದರಿಂದ ದಿನದ ಆದಾಯ ೨೦ರೂಪಾಯಿ ಮಧ್ಯ ಇದೆ. ಆದ್ದರಿಂದ ದಿನದ ಆದಾಯ ೨೦ರೂಪಾಯಿಯೆಂದು ಸುಲಭವಾಗಿ ಗೊತ್ತಾಗುವುದು. ಇದರ ಅರ್ಥ ೨೦ರೂಪಾಯಿ ಸಂಪಾದಿಸುವವರ ತಿಂಗಳ ಆದಾಯ ೬೦೦ರೂಪಾಯಿ ಮತ್ತು ವಾರ್ಷಿಕ ಆದಾಯ ೭,೨೦೦ ಆಗುತ್ತದೆ. ಈ ಅಂಕಿಸಂಖ್ಯೆಯನ್ನು ನೋಡಿ ನಾನು ಹತಾಷನಾದೆ. ೨೦ ರೂಪಾಯಿ ಸಂಪಾದಿಸುವ ವ್ಯಕ್ತಿ ಎಷ್ಟು ದಿನ ಕೆಲಸ ಮಾಡಿದರೆ ಕಲಾನಿಧಿ ಮಾರನ್ ಮತ್ತು ಕಾವೇರಿ ಮಾರನ್‌ರ ವಾರ್ಷಿಕ ಸಂಬಳಕ್ಕೆ ಸರಿಸಮನಾಗಬಲ್ಲದು ಎಂದು ಲೆಕ್ಕ ಹಾಕಿದೆ. ೨೦ರೂಪಾಯಿ ಸಂಪಾದಿಸುವ ವ್ಯಕ್ತಿ ೧,೭೭,೭೭೭ ವರ್ಷದವರೆಗೆ ಸಂಪಾದಿಸಿ ಮತ್ತು ಒಂದು ಪೈಸೆ ಖರ್ಚು ಮಾಡದೆ ಇದ್ದಲ್ಲಿ ಅವನ ಆದಾಯವೂ ಕಲಾನಿಧಿ ಮಾರನ್ ದಂಪತಿಗಳ ಒಂದು ವರ್ಷದ ವೇತನಕ್ಕೆ ಸಮಾನವಾಗುವುದು.

ಜಗತ್ತಿನಲ್ಲಿ ಯಾರೊಬ್ಬರು ೧,೭೭,೭೭೭ ವರ್ಷ ಬದುಕಿರಲಾರರು. ಒಂದು ವೇಳೆ ಬದುಕಿದ್ದರೆ ಸ್ಥಿತಿ ಏನಾಗುವುದು? ವಿಶ್ವ ರಾಷ್ಟ್ರ ಸಂಸ್ಥೆಯ ಅಭಿವೃದ್ಧಿ ವರದಿಯ ಅನುಸಾರ ಭಾರತೀಯರ ಸರಾಸರಿ ಆಯು ೬೪.೩೫ ವರ್ಷ. ಒಂದು ವೇಳೆ ಸಾಮಾನ್ಯ ಲೆಕ್ಕ ಹಾಕಿದರೂ ೧೦,೭೩,೩೩,೩೩ರೂಪಾಯಿ ಗಳಿಸುವುದಕ್ಕಾಗಿ ಅವನು ಈ ಭೂಮಿ ಮೇಲೆ ೨,೭೬೩ ಸಲ ಜನ್ಮಪಡೆಯಬೇಕಾಗುವುದು.

ಒಂದು ಕಾಲದಲ್ಲಿ ಭಾರತದ ರಾಷ್ಟ್ರಪತಿಯ ತಿಂಗಳ ವೇತನ ಹತ್ತು ಸಾವಿರ ರೂಗಳು ಇತ್ತು. ರಾಷ್ಟ್ರಪತಿಯ ವೇತನಕ್ಕಿಂತ ಹೆಚ್ಚಿನ ವೇತನ ಯಾರಿಗೂ ಇರಕೂಡದೆಂಬ ನಿಯಮವಿತ್ತು. ಈಗ ರಾಷ್ಟ್ರಪತಿಯ ತಿಂಗಳ ವೇತನ ೧,೫೦,೦೦೦ ರೂ ಇದೆ. ಪ್ರಧಾನಮಂತ್ರಿಯ ವೇತನ ಮತ್ತು ಭತ್ಯೆ ೧,೬೦,೦೦೦ ರಷ್ಟು. ಇನ್ನು ಕೆಲವು ಜನರ ವಾರ್ಷಿಕ ವೇತನ ಈ ಪ್ರಕಾರವಿದೆ:

ಹೆಸರು		ಕೋಟಿ ರೂಪಾಯಿಗಳಲ್ಲಿ
೧)	ನವೀನ್ ಜಿಂದಾಲ್	೭೩.೪
೨)	ಕಲಾನಿಧಿ ಮಾರನ್	೬೪.೪
೩)	ಕಾವೇರಿ ಮಾರನ್	೬೪.೪
೪)	ಸುನೀತ ಮಿತ್ತಲ್	೨೭.೫೧
೫)	ಬ್ರಜಮೋಹನ್ ಮಿತ್ತಲ್	೨೬.೭೫
೬)	ಪವನ್ ಮುಂಜಲ	೨೬.೪೭
೭)	ಬಿ.ಜಿ.ರಘುಪತಿ	೨೫.೯೨
೮)	ಪಂಕಜ್ ಪಟೇಲ್	೨೫.೦೦
೯)	ಸಜ್ಜನ್ ಜಿಂದಾಲ್	೨೦.೮೦
೧೦)	ದೇವು ಭಟ್ಟಾಚಾರ್ಯ	೧೭.೩೧

ದೇಶದ ಅರ್ಥ ಮಂತ್ರಿ ಮೂಲಕ ರಾಜ್ಯ ಸಭೆಯಲ್ಲಿ ಕೊಡಲಾದ ಹೇಳಿಕೆಯ ಪ್ರಕಾರ ದೇಶದ ೮,೨೦೦ ಸರ್ವಾಧಿಕ ಶ್ರೀಮಂತ ಜನರ ಕೈಯಲ್ಲಿ ಸುಮಾರು ೪೭,೨೫೦ ಕೋಟಿ ಶ್ರೀಮಂತಿಕೆ ಇದೆ. ಅದು ದೇಶದ ಅರ್ಥವ್ಯವಸ್ಥೆಯ ಶೇಕಡ ೭೦ ರಷ್ಟು. ಅಂದರೆ ಒಬ್ಬ ಬಾದಶಹನಾದರೆ ನೂರು ಜನರು ಭಿಕ್ಷುಕರಾದರು. ಮೇಲ್ಕಾಣಿಸಿದ ಜನರ ಒಟ್ಟು ವಾರ್ಷಿಕ ವೇತನ ೪೧೮.೭೭ ಕೋಟಿಯಾಗುತ್ತದೆ. ಅಂದರೆ ಸರಾಸರಿ ತಿಂಗಳ ಆದಾಯ ೩.೫ ಕೋಟಿಯಾಗುತ್ತದೆ.

ಇದೇ ರೀತಿ ಸಂಸತ್ತಿನ ಸದಸ್ಯರ ತಿಂಗಳ ವೇತನ ಹಾಗೂ ಭತ್ಯೆ ಈ ಪ್ರಕಾರವಿದೆ :
(ಸಾವಿರ ರೂಗಳಲ್ಲಿ)

ಸದನ ನಡೆಯುತ್ತಿರುವಾಗ ಸಿಗುವ ವೇತನ ಹಾಗೂ ಭತ್ಯೆ	೫೦,೦೦೦ ರೂಗಳು.
ಕ್ಷೇತ್ರೀಯ ಸಭೆಗಾಗಿ	೧,೦೦೦ ರೂಗಳು
ಕಾರ್ಯಾಲಯ ಭತ್ಯೆ	೨೫,೦೦೦ ರೂಗಳು
ಟೆಲಿಫೋನ್ ಭತ್ಯೆ	೨೫,೦೦೦ ರೂಗಳು

ಇದಲ್ಲದೆ ಅವರಿಗೆ ಓರ್ವ ಜೊತೆಗಾರನೊಂದಿಗೆ ವಾತಾನುಕೂಲಿತ ಶ್ರೇಣಿಯಲ್ಲಿ ಬಿಟ್ಟಿ ಯಾತ್ರೆಯ ಸೌಕರ್ಯವಿದೆ.

ಸಾರ್ವಜನಿಕ ಕ್ಷೇತ್ರದ ಸರ್ವಾಧಿಕ ವೇತನ ಪಡೆಯುವ ನೆಟ್ ಗ್ರೀಡ್ ಕಾರ್ಪೋರೇಷನ್‌ನ ಅಧ್ಯಕ್ಷ ಪಿ. ರಘುರಾಮನ್ನರ ತಿಂಗಳ ವೇತನ ಹತ್ತು ಲಕ್ಷ ರೂಪಾಯಿಗಳು. ಇದು ಪ್ರಧಾನ ಮಂತ್ರಿಯವರ ವೇತನಕ್ಕಿಂತ ಹತ್ತು ಪಟ್ಟು ಅಧಿಕ. ಯಾವ ದೇಶದಲ್ಲಿ ಲಕ್ಷಾಂತರ ಜನರಿಗೆ ಇರುವುದಕ್ಕಾಗಿ ತಮ್ಮದೇ ಆದ ಸ್ವಂತ ಮನೆಯಿಲ್ಲವೊ ಅದೇ ದೇಶದ ಶ್ರೀಮಂತ ಕುಬೇರ ಮುಖೇಶ್ ಅಂಬಾನಿ ೨೦೦೮ರಲ್ಲಿ ಮುಂಬಯಿಯ ಅಲ್ಟ್‌ಮೌಂಟ್ ರಸ್ತೆಯಲ್ಲಿ ತಮ್ಮ ಹೊಸ ಮನೆ ಕಟ್ಟಿದರು. ಮನೆಯ ಹೆಸರು 'ಎಂಟಿಲಿಯ'. ಮನೆಯ ನಿರ್ಮಾಣದ ಖರ್ಚು ೬ ಸಾವಿರ ಕೋಟಿ ಎಂದು ಅಂದಾಜು ಮಾಡಲಾಗಿದೆ. ೨೭ ಅಂತಸ್ತಿನ ಈ ಕಟ್ಟಡದ ಎತ್ತರ ೫೫೦ ಅಡಿ ಇದೆ. ಸಾಮಾನ್ಯತಹ ಇಷ್ಟು ಎತ್ತರದಲ್ಲಿ ೬೨ ಅಂತಸ್ತಿನ ಕಟ್ಟಡ ರಚನೆಯಾಗುತ್ತದೆ. ಒಟ್ಟು ಕ್ಷೇತ್ರಫಲ ೪ ಲಕ್ಷ ಚದುರ ಮೀಟರ್. ಇದರಲ್ಲಿ ೫೦೦ ಬೆಡ್‌ರೂಮನ್ನು ರಚಿಸಬಹುದು. ಈ ಮಹಲಿನಲ್ಲಿ ಮುಖೇಶ್ ಅಂಬಾನಿ ಪರವಾರದ ೬ ಜನ ಮುಖೇಶ್ ಪತ್ನಿ ನೀತ, ಮೂರು ಮಕ್ಕಳಾದ ಆಕಾಶ್, ಇಷಾ ಮತ್ತು ಅನಂತ ಹಾಗೂ ತಾಯಿ ಕೋಕಿಲಾ ಬೆನ್ ಇರುತ್ತಾರೆ. ಅವರ ಸೇವೆಗಾಗಿ ೬೦೦ ಜನ ಇರುತ್ತಾರೆ.

ಆರು ಜನರ ಓಡಾಟಕ್ಕಾಗಿ ೧೬೮ ಕಾರುಗಳಿವೆ. ಆ ಕಾರುಗಳ ಪಾರ್ಕಿಂಗಿಗಾಗಿ ಕಟ್ಟಡದ ಆರು ಅಂತಸ್ತುಗಳನ್ನು ಮೀಸಲಿಡಲಾಗಿದೆ. ಸರ್ವಿಸಿಂಗ್‌ಗಾಗಿ ಒಂದು ಅಂತಸ್ತನ್ನು ಮೀಸಲಿಡಲಾಗಿದೆ. ಅಂದರೆ ಪ್ರತಿಯೊಬ್ಬ

ವ್ಯಕ್ತಿಗೆ ೨೮ ಕಾರು. ಕುಟುಂಬದ ಸದಸ್ಯರ ಮನೋರಂಜನೆಗಾಗಿ ಥೀಯೇಟರ್ ಇದೆ. ಒಂದು ಅಂತಸ್ತು ಆಪತ್‌ಕಾಲೀನ ಸೇವೆಗಳಿಗಾಗಿ ಇದೆ. ಎರಡನೇ ಅಂತಸ್ತಿನಲ್ಲಿ ಆರೋಗ್ಯ ಸೇವೆಗಾಗಿ ಇದೆ. ಅದರಲ್ಲಿ ಈಜುಗೊಳ ಇದೆ, ಜಿಮ್ನಾಸ್ಟಿಕ್ ಇತ್ಯಾದಿಗಳ ಸೌಕರ್ಯವಿದೆ. ಮೇಲ್ಛಾವಣಿಯಲ್ಲಿ ಮೂರು ಹೆಲಿಪ್ಯಾಡ್ ಮಾಡಲಾಗಿದೆ. ಎರಡು ಅಂತಸ್ತುಗಳು ಅತಿಥಿಗಳಿಗಾಗಿ ಇವೆ. ಒಟ್ಟು ಒಂಭತ್ತು ಎಕ್ಸಲೇಟರ್ ಇವೆ. ಈ ಭವನದ ವಾಸಯೋಗ್ಯ ಒಟ್ಟು ಕ್ಷೇತ್ರಫಲ ನಾಲ್ಕು ಲಕ್ಷ ಅಡಿ.

೨೫ ನವೆಂಬರ್ ೨೦೧೦ರಲ್ಲಿ ಮುಖೇಶ್ ಅಂಬಾನಿಯವರ ಈ ಮಹಲಿನ ಮೊದಲನೆಯ ಎಲೆಕ್ಟ್ರಿಕ್ ಬಿಲ್ ೭೦,೬೯,೪೮೮ ರೂಪಾಯಿ ಆಗಿತ್ತು. ಒಟ್ಟು ೬,೩೭,೨೪೦ ಯುನಿಟ್ ವಿದ್ಯುತ್ತಿನ ಬಳಕೆಯಾಗಿತ್ತು. ಇದು ೭,೦೦೦ ಗಂಟೆಗಳಿಗೂ ಅಧಿಕ ವಿದ್ಯುತ್ ಉಪಯೋಗಿಸಿದರೆ ಆಗುವಷ್ಟು. ಈ ಬಿಲ್ ನನ್ನ ಶರೀರದಲ್ಲಿ ಉರಿ ಹಚ್ಚಿತು. ಇದೊಂದು ರಾಷ್ಟ್ರೀಯ ಅಪರಾಧವೆಂದು ತಿಳಿಯುತ್ತೇನೆ. ರಾಜಧಾನಿ ದಿಲ್ಲಿಯಂತಹ ನಗರಗಳಲ್ಲಿ ಕೂಡ ಎಲ್ಲರಿಗೂ ೨೪ ಗಂಟೆ ವಿದ್ಯುತ್ ದೊರೆಯುವುದಿಲ್ಲ. ಮಹಾರಾಷ್ಟ್ರದಲ್ಲಿ ಸುಮಾರು ೨೯,೦೦೦ ಮತ್ತು ಗುಜರಾತ್‌ನಲ್ಲಿ ಸುಮಾರು ೩,೯೦,೦೦೦ ರೈತರು ವಿದ್ಯುತ್ ಉಪಯೋಗಿಸಿದರ ಸಾಲದಲ್ಲಿ ಮುಳುಗಿದ್ದರಿಂದ ೧೯೯೭ ರಿಂದ ೨೦೦೨ರ ಮಧ್ಯದಲ್ಲಿ ೬,೩೮,೬೪೫ ಮತ್ತು ೧೯೯೭ ರಿಂದ ೨೦೦೮ ರವರೆಗೆ ೧೩,೪೨,೮೭೩ ರೈತರು ಆತ್ಮಹತ್ಯೆ ಮಾಡಿಕೊಂಡರು. National Crime Record Bureau ದ ಅನುಸಾರ ೨೦೦೯ ರವರೆಗೆ ೨,೪೦,೦೦೦ ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಪ್ರತಿ ೩೨ ನಿಮಿಷಕ್ಕೆ ಒಬ್ಬ ರೈತ ಆತ್ಮಹತ್ಯೆ ಮಾಡಿಕೊಳ್ಳುತ್ತಾನೆ.

ಭಾರತದ ಕೆಲ ಶ್ರೀಮಂತ ಕುಬೇರರ ಸಂಪತ್ತು ಈ ಪ್ರಕಾರ ಇದೆ. ಅದನ್ನು ನೋಡಿದಾಗ ದೇಶದಲ್ಲಿ ಇರುವ ಆರ್ಥಿಕ ವಿಷಮತೆ ಗೊತ್ತಾಗುತ್ತದೆ. ಬಂಡವಾಳವಾದದ ಬೆಟ್ಟ ಮತ್ತು ಬಡತನದ ಗುಂಡಿಯ ಪರಿಚಯವಾಗುತ್ತದೆ. ಈ ಅಂಕೆ ಸಂಖ್ಯೆಗಳು ನಿಸ್ಸಂದೇಹವಾಗಿ ದೇಶದ ಸಾಮಾಜಿಕ – ಆರ್ಥಿಕ ವಿಷಮತೆಯ ಜೀವಂತ ಚಿತ್ರ ತೋರಿಸುತ್ತದೆ. ದೇಶದಲ್ಲಿ ಇಂತಹ ಸ್ಥಿತಿ ಉಂಟಾಗುವುದಕ್ಕೆ ಕಾರಣ ನಾವು ಗಾಂಧಿಯವರ ಮಾರ್ಗದರ್ಶನವನ್ನು ನಿಜ ಅರ್ಥದಲ್ಲಿ ನಮ್ಮದಾಗಿಸಿಕೊಂಡಿಲ್ಲ. ಗಾಂಧಿ ೧೯೦೯ ರಲ್ಲಿ ಹಿಂದ್ ಸ್ವರಾಜ್‌ದ ಮೂಲಕ ನಮಗೆ ಪಶ್ಚಿಮೀ ಸಂಸ್ಕೃತಿಯಿಂದ ಉತ್ಪನ್ನವಾಗುವ ಗಂಡಾಂತರವನ್ನು ಸ್ಪಷ್ಟವಾಗಿ ಹೇಳಿದ್ದರು. ಭಾರತದಲ್ಲಷ್ಟೇ ಅಲ್ಲ ಇಡೀ ಜಗತ್ತಿನಲ್ಲಿ ಇಂದಿರುವ ಅಶಾಂತಿ, ಹಿಂಸೆ, ಆತಂಕ ಮತ್ತು ಅನೀತಿಯ ವಾತಾವರಣವಿದೆ. ಅವುಗಳಿಂದ ಪಾರಾಗುವುದಕ್ಕಾಗಿ ಗಾಂಧಿಯ ಕಡೆಗೆ ಹಿಂದಿರುಗಬೇಕಾಗುವುದು ಮತ್ತು ಹಿಂದ್ ಸ್ವರಾಜ್ಯದ ಸೂತ್ರ ವಾಕ್ಯವನ್ನು ನಮ್ಮದನ್ನಾಗಿ ಮಾಡಿಕೊಳ್ಳಲು ಪುನರ್‌ಪಾಠ ಕೂಡ ಮಾಡಬೇಕಾಗುವುದು.

ಸಾಭಾರ : ಸರ್ವೋದಯ ಜಗತ್, ಅನು : ಸುಕೌ

ಸುಲಭೋಪಾಯದ ಎಡವಟ್ಟುಗಳು

- ಪ್ರಸನ್ನ

ಬದುಕನ್ನು ಸುಲಭವಾಗಿಸ ಹೊರಟಿದ್ದೇವೆ ನಾವು; ಸುಲಭವಾಗಿಸುವದೇ ಬದುಕಿನ ಬಹುದೊಡ್ಡ ಸಾಧನೆಯೆಂದು ತಿಳಿದಿದ್ದೇವೆ. ಕಳೆದೆರಡು ಶತಮಾನಗಳಲ್ಲಿ ಅವಿಶ್ಕಾರಗೊಂಡ ಎಲ್ಲ ತಂತ್ರಜ್ಞಾನಗಳು ಪ್ರಗತಿಯ ಪರಿಕಲ್ಪನೆಗಳು ಎಲ್ಲ ರಾಜಕೀಯ ಹಾಗೂ ಸಾಮಾಜಿಕ ಸಿದ್ಧಾಂತಗಳು ಅಹರ್ನಿಶಿ ಹೆಣಗುತ್ತಿರುವುದು ಬದುಕನ್ನು ಮತ್ತೂ ಮತ್ತೂ ಸುಲಭವಾಗಿಸುವತ್ತಲೇ ತಾನೆ? ಮಾತ್ರವಲ್ಲ, ಸುಲಭವಾಗಿ ಕುಂತನೀರು ಅಲುಗದಂತೆ ಬದುಕಿಬಿಡುವುದೇ ಉತ್ತಮ ಬದುಕು, ಕಷ್ಟಜೀವನ ಕೀಳುಬದುಕು ಎಂದು ನಾವು ತಿಳಿಯತೊಡಗಿದ್ದೇವೆ. ಇದೊಂದು ವಿಪರ್ಯಾಸವೇ ಸರಿ. ಏಕೆಂದರೆ ಎಲ್ಲ ಧರ್ಮಗಳೂ ಐಷಾರಾಮಿ ಬದುಕನ್ನು ಸಾರಾಸಗಟಾಗಿ ತಿರಸ್ಕರಿಸಿದೆ. ಎಲ್ಲ ಕ್ರಾಂತಿಕಾರಿ ವಿಚಾರಧಾರೆಗಳೂ ಬಡವರನ್ನು ಅವರ ಸರಳ ಬದುಕಿಗಾಗಿ ಮೆಚ್ಚಿಕೊಂಡಿವೆ.

ಐಷಾರಾಮಿ ಬದುಕು ಹಿಂದೆಯೂ ಇತ್ತು. ಆದರೆ ಕಳೆದೆರಡು ಶತಮಾನಗಳಿಂದೀಚೆಗೆ – ಸ್ವಯಂಚಾಲಿತಯಂತ್ರಗಳು ಹಾಗೂ ಯಂತ್ರನಾಗರೀಕತೆ ಜಾರಿಕ್ಕೊಂಡ ನಂತರದಲ್ಲಿ ನಾವು ಯಂತ್ರಗಳನ್ನು ಬಳಸಿಕೊಂಡು ಸುಲಭ ಬದುಕನ್ನು ಇಡೀ ಸಮಾಜಕ್ಕೆ ವಿಸ್ತರಿಸಲು ಹೊರಟಿದ್ದೇವೆ. ಸರಳವಾಗಿ ಹೇಳುವುದಾದರೆ ಎಲ್ಲ ಬಡವರನ್ನೂ ಶ್ರೀಮಂತರನ್ನಾಗಿಸಹೊರಟಿದ್ದೇವೆ ನಾವು. ಇಲ್ಲಿ ನಾವು ಗಮನಿಸಬೇಕಾದ ಸಂಗತಿಯೆಂದರೆ ಸುಲಭ ಬದುಕಿನ ವಿಸ್ತರಣೆಯ ಹಿಂದೆ ಸಮಾನತೆಯ ಮಹಾನ್ ಆಶಯವು ಬೆಂಬಲಕ್ಕೆ ನಿಂತಿದೆ. ಹಾಗಾಗಿ ಮೇಲ್ನೋಟಕ್ಕೆ ಇದೊಂದು ಒಳ್ಳೆಯ ಪ್ರಯತ್ನವೇ ಹೌದು ಎಂದು ಕಾಣುತ್ತದೆ. ಆದರೆ ಸುಲಭ ಬದುಕಿನ ವಿಸ್ತರಣೆಯ ಪರಿಣಾಮ ಮಾತ್ರ ದುರಂತಮಯವಾಗಿ ಪರಿಣಮಿಸಿದೆ.

ತಂತ್ರಜ್ಞಾನ ಹಾಗೂ ಪ್ರಗತಿಯ ವಿಚಾರಗಳನ್ನು ಬಳಸಿಕೊಂಡು ಬದುಕನ್ನು ಸುಲಭಗೊಳಿಸುವ ನಮ್ಮೀ ಪ್ರಯತ್ನದಿಂದಾಗಿ ಬಡವರು ಶ್ರೀಮಂತರಾಗುವರೋ ಇಲ್ಲವೋ ನಾಕಾಣೆ, ಆದರೆ ಶ್ರೀಮಂತರು ಮಾತ್ರ ನಿಸ್ಸಂದೇಹವಾಗಿ ಮತ್ತಷ್ಟು ಶ್ರೀಮಂತರಾಗುತ್ತಿದ್ದಾರೆ. ಅವರ ಮೇಲೆ ಸಮಾಜಕ್ಕಿದ್ದ ನೈತಿಕ ಹಿಡಿತವು ಕಳಚಿ ಹೋಗುತ್ತಿದೆ. ಹಣವನ್ನು ಸಂಚಯಿಸುವುದು ಹಾಗೂ ಶ್ರೀಮಂತಿಕೆಯನ್ನು ಮೆರೆಯುವುದು ಕೆಟ್ಟಸಂಗತಿ ಎಂಬ ಪಾಪ ಪ್ರಜ್ಞೆಯು ಇಂದು ಮಾಯವಾಗಿದೆ. ಶ್ರೀಮಂತರು ರಾಕ್ಷಸರಾಗುತ್ತಿದ್ದಾರೆ. ಇತ್ತ ಬಡವರು ಹಸಿದ ತೋಳಗಳಾಗಿದ್ದಾರೆ. ಶ್ರೀಮಂತರನ್ನು ನಕಲು ಮಾಡುವ ವ್ಯರ್ಥ ಪ್ರಯತ್ನ ನಡೆಸಿದ್ದಾರೆ ಬಡವರು.

ಸುಲಭ ಬದುಕಿನ ವಿಸ್ತರಣೆಗೆ ಬೆಂಬಲವಾಗಿ ನಿಂತಿದ್ದರಿಂದಲೇ ಸಮಾನತೆ ಹಾಗೂ ಸಮಾಜವಾದದ ಆಶಯಗಳು ತೀವ್ರತರವಾದ ಹಿನ್ನೆಡೆಗೆ ಗುರಿಯಾಗಿವೆ ಎಂದು ನಾನು ನಂಬುತ್ತೇನೆ. ಮಾತ್ರವಲ್ಲ ಇವು 'ಅಧರ್ಮ' ಎಂದು ಸಹ ಬಿಂಬಿತವಾಗುತ್ತಿವೆ. ಇತ್ತ ಸಾಂಸ್ಥಿಕ ಧರ್ಮಗಳು ಹಗೂ ಅವುಗಳ ಬೆಂಬಲಿಗ ಬಲಪಂಥೀಯ ರಾಜಕೀಯ ಸಿದ್ಧಾಂತಗಳು ಮೇಲುಗೈ ಸಾಧಿಸುತ್ತಿರುವಂತೆ ನಮಗೆ ಭಾಸವಾಗುತ್ತಿದೆ. ಇದೊಂದು ದುರಂತವೇ ಸರಿ!

ಆದರೆ ಯಾವುದೇ ಸಾಂಸ್ಥಿಕ ಧರ್ಮವಾಗಲೀ ಅಥವಾ ಬಲಪಂಥೀಯ ರಾಜಕೀಯ ಸಿದ್ಧಾಂತವಾಗಲೀ ಇವತ್ತಿನ ಸಂಕಟದ ಲಾಭವನ್ನು ಪಡೆಯುತ್ತಿವೆಯೇ ಹೊರತು, ಸಂಕಟವನ್ನು ಎದುರಿಸಲು ಸಮರ್ಥವಾಗಿಲ್ಲ. ಏಕೆಂದರೆ ಸಾಂಸ್ಥಿಕ ಧರ್ಮಗಳೂ ಸಹಿತ ಸುಲಭ ಬದುಕಿಗೆ ಜಾರಿಕೊಂಡಿದೆ. ಎಲ್ಲ ಸಾಂಸ್ಥಿಕ ಧರ್ಮಗಳೂ ಜಾತಿವ್ಯವಸ್ಥೆಗಳಾಗಿ ಪರಿವರ್ತಿತವಾಗಿವೆ. ರಾಜಕೀಯ ಶಕ್ತಿ ಕೇಂದ್ರಗಳಾಗಿ ರೂಪುಗೊಂಡು ಶ್ರೀಮಂತಿಕೆಯ ಕೆಸರಿನಲ್ಲಿ ಹೂತು ಹೋಗಿವೆ. ಧರ್ಮಗಳ ಮೂಲ ಆಶಯವಾದ ಸರಳ ಬದುಕು ಹಾಗೂ ಸರಳ ನಡವಳಿಕೆಗಳು ಕೇವಲ ಸಂಕೇತಗಳಾಗಿ ಪರಿವರ್ತಿತವಾಗಿ ಗರ್ಭಗುಡಿಗಳಲ್ಲಿ ಬಂಧಿತವಾಗಿವೆ. ಇತ್ತ ನೈಜ ಧರ್ಮದ ಆಸರೆಯೂ ಇಲ್ಲದೆ ಅತ್ತ ನೈಜ ಸಮಾಜವಾದದ ಬೆಂಬಲವೂ ಇಲ್ಲದೆ ಮಾನವ ಜನಾಂಗವಿಂದು ರೋಗಿಷ್ಟವಾಗಿ ನರಳುತ್ತಿದೆ.

ಯಂತ್ರಗಳನ್ನು ಬಳಸಿಕೊಂಡು ಸುಲಭಸಾಧ್ಯವಾಗಿ ಬದುಕಿಬಿಡುವುದು ನಿಜಕ್ಕೂ ಅಷ್ಟೊಂದು ಉತ್ತಮ ಮೌಲ್ಯ ಹೌದೇ? ಯೋಚಿಸಿ ಸುಲಭಸಾಧ್ಯ ಬದುಕಿನಲ್ಲಿ ಒಂದು ಸೌಕರ್ಯವಿದೆ ನಿಜ. ಬದುಕಿನ ಕನಿಷ್ಠ ಅಗತ್ಯಗಳನ್ನು ಪೂರೈಸಿಕೊಳ್ಳಲಿಕ್ಕೆಂದು ನಾವು ಈವರೆಗೆ ಬಳಸುತ್ತಿದ್ದ ಸಮಯವು ಈಗ ಉಳಿತಾಯವಾಗುತ್ತಿದೆ ಹಾಗೂ ಅಂತಹ ಸಮಯವನ್ನು ಉತ್ತಮ ರೀತಿಯಲ್ಲಿ ವುಪಯೋಗಿಸುವ ಸಾಧ್ಯತೆಯು ನಮಗಿದೆ. ಆದರೆ ಯವುದದು ಉತ್ತಮ ವಿನಿಯೋಗ?

ನಾವು ದಿನಕ್ಕೆ ಅರ್ಧಗಂಟೆ ದಿನಪತ್ರಿಕೆ ಓದುತ್ತೇವೆ, ಒಂದು ಗಂಟೆ ಟೀವಿ ನೋಡುತ್ತೇವೆ. ಒಂದರಿಂದ ಎರಡು ಗಂಟೆ ವಾಹನಗಳಲ್ಲಿ ಕುಳಿತು ಪಯಣಿಸುತ್ತೇವೆ, ದುಬಾರಿ ಹೋಟೆಲುಗಳಿಗೆ ತೆರಳಿ ಊಟ ಮಾಡುತ್ತೇವೆ, ಪ್ರವಾಸ ಹೋಗುತ್ತೇವೆ, ಮನರಂಜನೆ ಮಾಡಿಕೊಳ್ಳುತ್ತೇವೆ... ಇತ್ಯಾದಿ. ಇದು ಸಮಯದ ಉತ್ತಮ ವಿನಿಯೋಗ ಎನ್ನುವುದಾದರೆ, ಇಡೀ ದಿನ ಉತ್ತಮ ಬದುಕನ್ನು ಬದುಕಿ ಸಂಜೆ ಹಾಸಿಗೆಗೆ ಉರುಳಿಕೊಂಡಾಗ ನಮಗೇಕೆ ನಿದ್ರೆ ಬರುತ್ತಿಲ್ಲ? ನಾವೇಕೆ ರಕ್ತದೊತ್ತಡ, ಸಕ್ಕರೆ ಕಾಯಿಲೆಗಳಿಂದ ನರಳುತ್ತಿದ್ದೇವೆ? ಏಕೆ ಜಗಳಗಂಟರಾಗಿದ್ದೇವೆ, ವ್ಯಗ್ರರಾಗಿದ್ದೇವೆ? ಇಷ್ಟೆಲ್ಲ ಮನರಂಜನೆಯ ನಂತರವೂ ನಮ್ಮ ಮಿದುಳು ಅದೇಕೆ ಉದ್ವೇಗದಲ್ಲಿಯೇ ಉಳಿದಿರುತ್ತದೆ? ಆಧುನಿಕ ಬದುಕಿನ ಆಧುನಿಕ ಚಟುವಟಿಕೆಗಳು ಉತ್ತಮ ಬದುಕು

ಎಂಬುದು ಭ್ರಮೆಯಷ್ಟೆ.

ನಮ್ಮ ಕನಿಷ್ಠ ಅಗತ್ಯಗಳನ್ನು ಪೂರೈಸಿಕೊಳ್ಳಲಿಕ್ಕೆಂದು ಹಿಂದೆ ನಾವು ನಡೆಸುತ್ತಿದ್ದ 'ವ್ಯರ್ಥ' ಚಟುವಟಿಕೆಗಳು ನಿಜಕ್ಕೂ ವ್ಯರ್ಥ ಚಟುವಟಿಕೆಗಳು ಹೌದೇ? ವ್ಯವಸಾಯ ಮಾಡುವುದು, ಅಡುಗೆ ಮಾಡುವುದು, ನಡಿಗೆ ಮಾಡುವುದು, ಮಕ್ಕಳ ಪೋಷಣೆ ಮಾಡುವುದು, ಮುದುಕರ ಪೋಷಣೆ ಮಾಡುವುದು, ನಿಜಕ್ಕೂ ವ್ಯರ್ಥ ಚಟುವಟಿಕೆಗಳೇ? ಬದುಕಿನ ಸುಲಭತೆ ಆಸ್ತಿ ಹಾಗೂ ಆಹಾರದ ಸಂಚಯನ ಹಾಗೂ ಕಷ್ಟ ನಿವಾರಣೆಗಳೇ ಬದುಕಿನ ಅಂತಿಮ ಗುರಿಯಾಗಬಾರದು. ತಂತ್ರಜ್ಞಾನದ ವಿಸ್ತರಣೆಯ ಅತಿರೇಕಗಳನ್ನು ನಾವು ನಿಲಿಸಬೇಕು. ಯಂತ್ರಗಳ ಮೇಲಿನ ನಮ್ಮ ಅವಲಂಬನೆಯನ್ನು ಕಡಿಮೆ ಮಾಡಿಕೊಳ್ಳಬೇಕು. ಯಂತ್ರಗಳು ಕಸವನ್ನು ಮಾತ್ರವೇ ಸೃಷ್ಟಿಸಬಲ್ಲದು, ಉತ್ತಮ ಬದುಕನ್ನು ಖಂಡಿತಾ ಅಲ್ಲ.

ಮನರಂಜನೆಯ ಉದಾಹರಣೆಯನ್ನೇ ತೆಗೆದುಕೊಳ್ಳಿ. ವೃತ್ತಿಯಿಂದ ನಾನೊಬ್ಬ ರಂಗಕರ್ಮಿ ಹಾಗೂ ಲೇಖಕ. ಹಾಗಾಗಿ ಮನರಂಜನೆ ನನ್ನ ಕಸುಬು. ಆದರೆ ಇತ್ತೀಚೆಗೆ ಮನರಂಜನೆಯ ಬಗ್ಗೆಯೇ ನನಗೆ ಗಂಭೀರ ಅನುಮಾನಗಳು ಮೂಡತೊಡಗಿವೆ. ರಂಜನೆಯನ್ನು ಒಂದು ಬೃಹತ್ ಕೈಗಾರಿಕೆಯಾಗಿ ನಾವು ಬೆಳೆಸುತ್ತಿದ್ದೇವೆ. ಆ ಮೂಲಕವಾಗಿ ಬದುಕಿಗೂ ರಂಜನೆಗೂ ನಡುವೆ ಇದ್ದ ಕೊಂಡಿಯನ್ನು ಕಳಚಿ ರಂಜನೆಯನ್ನು ಸಂಪೂರ್ಣವಾಗಿ ಸ್ವತಂತ್ರಗೊಳಿಸಿದ್ದೇವೆ. ಹಿಂದೆಲ್ಲ ರಂಜನೆ ಹಾಗೂ ದೈವಾರಾಧನೆಗಳು ಬೆಸೆದುಕೊಂಡಿರುತ್ತಿತ್ತು, ರಂಜನೆ ಹಾಗೂ ಕ್ರಾಂತಿಯ ಆಶಯಗಳು ಬೆಸೆದುಕೊಂಡಿರುತ್ತಿತ್ತು. ನಾವು ನೋಡುತ್ತಿದ್ದ ಯಕ್ಷಗಾನ ಪ್ರಸಂಗವೇ ಮನರಂಜನೆಯನ್ನೂ ನೀಡುತ್ತಿತ್ತು. ಬದುಕಿನ ನೈತಿಕ ವಿತಿಗಳನ್ನೂ ಸೂಚಿಸುತ್ತಿತ್ತು. ನಾಟಕವೆಂಬುದು ರಂಜನೆಯೂ ಆಗಿರುತ್ತಿತ್ತು. ಬದಲಾವಣೆಯ ಅಸ್ತ್ರವೂ ಆಗಿರುತ್ತಿತ್ತು. ಈಗ ದೈವ ಬೇರೆ, ಮನರಂಜನೆ ಬೇರೆ, ಸಮಾಜವಾದ ಬೇರೆ ಎಂದು ಒಡೆದಿದ್ದೇವೆ. ಆ ಮೂಲಕವಾಗಿ ಎರಡೂ ಸಂಸ್ಥೆಗಳನ್ನೂ ಹಾಳುಗೆಡವಿದ್ದೇವೆ.

ಸುಲಭವಾಗಿ ಬದುಕಿ ಬಿಡುವುದು ಮಾನವನ ಅಂತಿಮ ಗುರಿಯಾಗಬಾರದು. ಸುಲಭ ಬದುಕನ್ನು ಅನುಮಾನದಿಂದ ಕಾಣಬೇಕು; ಸುಲಭ ಬದುಕನ್ನು ಸೃಷ್ಟಿಸುತ್ತಿರುವ ಎಲ್ಲ ರೀತಿಯ ಯಂತ್ರಗಳು, ಯಂತ್ರ ನಾಗರೀಕತೆ, ರಾಜಕೀಯ ವ್ಯವಸ್ಥೆ, ಆರ್ಥಿಕ ವ್ಯವಸ್ಥೆಗಳನ್ನು ನಾವು ಅನುಮಾನದಿಂದ ನೋಡಬೇಕು. ನಾವು ಹಾಗೆ ಮಾಡುತ್ತಿಲ್ಲ. ಸುಲಭ ಬದುಕಿನ ಯಂತ್ರಗಳು ನಮ್ಮ ಮನಸ್ಸನ್ನು ಸೂರೆಗೊಂಡುಬಿಟ್ಟಿದೆ. ನಾವು ಯಂತ್ರಗಳಿಗೆ ಅಡಿಯಾಳಾಗಿದ್ದೇವೆ.



ಸೀಬರ್ಡ್ ನೌಕಾನೆಲೆ ಮತ್ತು ಕಾರವಾರದ ಗೋಳು

- ನಾಗತಿಹಳ್ಳಿ ಚಂದ್ರಶೇಖರ್

ನ್ಯಾಯ ಬೇಡಲು ರಾಜಧಾನಿಗೆ ಬರುತ್ತಿದ್ದೇವೆ, ಬೆಂಬಲಿಸಿ ಎಂಬ ಬಿನ್ನಹದ ಕರೆ ದೂರದ ಕಾರವಾರದಿಂದ ಬಂದಾಗ ನನಗೆ ಅಚ್ಚರಿ. ತನ್ನೊಳಗಿನ ಹಸುಳೆಗಳನ್ನೇ ಕಾಪಾಡಿಕೊಳ್ಳಲಾಗದ ಈ ಮಹಾನಗರ, ದೂರದೂರಿನವರ ದೂರುಗಳನ್ನು ಆಲಿಸೀತೇ ಎಂಬ ಅನುಮಾನ. ಬರೆಯುವವನಿಗೆ ಭರವಸೆಯ ಇಂಕು ಎಂದೂ ಖಾಲಿಯಾಗಬಾರದು, ಅವನು ಸಿನಿಕನಾಗಬಾರದು ಎಂಬ ಗಾಢ ನಂಬಿಕೆಯಿಂದ ಮುಂಚೆ ಬಂದೀಖಾನೆಯಾಗಿದ್ದ, ಈಗ ಸ್ವಾತಂತ್ರ್ಯ ಉದ್ಯಾನವನವೆಂದು ಕರೆಯಲಾಗುವ, ಎಷ್ಟು ಧ್ವನಿವರ್ಧಕಗಳನ್ನು ಬಳಸಿ ಅರಚಿಕೊಂಡರೂ ಪ್ರಭುತ್ವಕ್ಕೆ ಕೇಳಿಸಲಾಗದಷ್ಟು ಅಂತರವಿರುವ, ಆ ಜಾಗಕ್ಕೆ ಹೋದಾಗ ಕಾರವಾರ ಅಂಕೋಲಾ ಪರಿಸರದ ನೌಕಾನೆಲೆ ನಿರಾಶ್ರಿತರು, ಹೋರಾಟಗಾರರು, ರಾಜಕೀಯ ಗಣ್ಯರು ಕುಳಿತು ಧಿಕ್ಕಾರದ ಘೋಷಣೆ ಕೂಗುತ್ತಿದ್ದರು. ಎಂದಿನಂತೆ ಸ್ವಾತಂತ್ರ್ಯ ಹೋರಾಟಗಾರ ಹೆಚ್.ಎಸ್.ದೊರೆಸ್ವಾಮಿ, ಚಿಂತಕ ಸಿ.ಎಸ್.ದ್ವಾರಕಾನಥ್ ಮುಂತಾದವರು ಬರಲಿದ್ದರು. ನಾನೂ ಕುಳಿತು ಒಂದೆರಡು ಮಾತನಾಡಿದೆ; ಒಂದೆರಡು ಘೋಷಣೆ ಕೂಗಿದೆ. ಇದೆಲ್ಲ ನಿಷ್ಫಲವೆಂದು ಒಳದನಿ ಹೇಳುತ್ತಿತ್ತು. ಆದರೆ ಹೀಗೆ ಪ್ರತಿಭಟಿಸುವುದಲ್ಲದೆ ನಮ್ಮ ವ್ಯವಸ್ಥೆಯಲ್ಲಿ ಅನ್ಯಮಾರ್ಗವೇನಿದೆ?

ತಲೆಗಳೂ, ತಲೆಮಾರುಗಳೂ ಉರುಳಿಹೋದವು. ಈ ಹೋರಾಟ ಆರಂಭವಾಗಿ ಮೂವತ್ತು ವರ್ಷಗಳಾದವು. ಹೋರಾಟ ಆರಂಭವಾದಾಗ ಬಾಲಕರಾಗಿದ್ದವರು ಈಗ ಮಧ್ಯವಯಸ್ಕರಾಗಿದ್ದಾರೆ. ಮಧ್ಯವಯಸ್ಕರು ಮುದುಕರಾಗಿದ್ದಾರೆ. ಮುದುಕರು ತೀರಿಕೊಂಡಿದ್ದಾರೆ. ಬರುವ ಹೊಸತಲೆಮಾರಿಗೆ ಈ ಹೋರಾಟದ ತಲೆಬುಡವೇ ತಿಳಿಯುವುದಿಲ್ಲ. ಈ ಉತ್ತರ ಕನ್ನಡ ಜಿಲ್ಲೆ ನನಗೆ ಬುದ್ಧಿ ತಿಳಿದಾಗಿನಿಂದ ಉತ್ತರ ಕಾಣದ ಜಿಲ್ಲೆಯಂತೆಯೇ ಕಾಣಿಸುತ್ತಿದೆ. ಸಮೃದ್ಧ ಕಾಡು, ಕಣಿವೆ, ನದಿ, ಘಟ್ಟಶ್ರೇಣಿ ಮತ್ತು ಕಡಲಿನಿಂದಾವೃತವಾದ ಕೆನೆಗಟ್ಟಿದ ಬೆಳ್ಳಿಮೋಡಗಳನ್ನು, ಹರಿದ್ವರ್ಣದ ಕಾಡುಗಳನ್ನು ಕಂಡು ಪ್ರಾಸಪ್ರಿಯರು ಕಾರವಾರ ಕನ್ನಡ ನಾಡಿನ ಕಾಶ್ಮೀರ ಎಂದರು. ಬಣ್ಣನೆಗಳನ್ನು ಹಾಡಲು, ಕೇಳಲು ಚೆಂದ. ಪ್ರಗತಿಯ ಹೆಸರಲ್ಲಿ ಉತ್ತರ ಕನ್ನಡ ಜಿಲ್ಲೆಯಲ್ಲಿ ಏಕಪ್ರಕಾರವಾಗಿ ನಡೆಯುತ್ತಿರುವ ಚಟುವಟಿಕೆಗಳ ದೆಸೆಯಿಂದ ಅಲ್ಲಿನ ಬಡ ರೈತರ ಬದುಕಿನಲ್ಲಿ ಬಣ್ಣಗಳಿಲ್ಲ; ಬವಣೆಗಳಿವೆ. ಸೀಬರ್ಡ್ ನೌಕಾನೆಲೆ ಯೋಜನೆ ಸಣ್ಣ ರೈತರನ್ನು ಕುಕ್ಕಿ ತಿಂದಿದೆ.

ಇನ್ನೂ ಪ್ರಾಣ ಉಳಿಸಿ ಕೊಂಡಿರುವ ಪಳೆಯುಳಿಕೆಯಂಥವರು ಸ್ವಪ್ರೇರಣೆಯಿಂದ ಪ್ರತಿಭಟಿಸಲು ಬೆಂಗಳೂರಿಗೆ ಬಂದಿದ್ದರು.

ಮೂರು ಕಡೆ ನೀರಿರುವ ಭಾರತಕ್ಕೆ ಭೂಸೇನೆ, ವಾಯುಸೇನೆಗಳಂತೆಯೇ, ನೌಕಾಸೇನೆ ಬಹುಮುಖ್ಯ. ಸೇನೆಯ ಸಂರಚನೆ, ಅಗಾಧ ಸ್ವರೂಪ, ಕಡಿವಾಣವಿಲ್ಲದ ಬಜೆಟ್, ಅಪರಿಮಿತ ಯುದ್ಧೋಲಕರಣಗಳ ಖರೀದಿ ಬೆಚ್ಚಿಬೀಳಿಸುತ್ತವೆ. ಶಿಕ್ಷಣ, ಆರೋಗ್ಯ, ಕೃಷಿ ಮುಂತಾದ ಅಗತ್ಯ ಕ್ಷೇತ್ರಗಳಿಗೆ ಹಣದ ಕೊರತೆಯಾದರೂ, ಮಿಲಿಟರಿಗೆ ಅರೆಕೊರೆ ಆಗುವಂತಿಲ್ಲ. ಪಾಕಿಸ್ತಾನ, ಚೀನಾಗಳಂಥ ನೆರೆಯ ರಾಷ್ಟ್ರಗಳಿರುವಾಗ ಭಾರತವು ಸುಸಜ್ಜಿತ ಸೇನೆಯನ್ನು ಹೊಂದಬೇಕಾಗಿರುವುದು ಅನಿವಾರ್ಯ. ಸೈನಿಕರ ತ್ಯಾಗವನ್ನು, ಸೇನೆಯ ಮಹತ್ವವನ್ನು ಯಾರೂ ನಿರಾಕರಿಸುತ್ತಿಲ್ಲ. ಆದರೆ ತನ್ನ ನೌಕಾನೆಲೆಗಾಗಿ ರೈತರ ಭೂಮಿಯನ್ನು ಕಸಿದುಕೊಂಡು ಸಾವಿರಾರು ಸಣ್ಣ ರೈತರನ್ನು ಶಾಶ್ವತ ತಬ್ಬಲಿಗಳನ್ನಾಗಿಸಿ, ಅವರಿಗೆ ನೀಡಬೇಕಾದ ಪರಿಹಾರವನ್ನು ನ್ಯಾಯಬದ್ಧವಾಗಿ ನೀಡದೆ ಬೇಜವಾಬ್ದಾರಿ ತನದಿಂದ ಮೆರೆಯುವ ಇದನ್ನು ರಕ್ಷಣಾ ಇಲಾಖೆ ಎಂದು ಹೇಗೆ ಕರೆಯುವುದು? ದೇಶವನ್ನು ರಕ್ಷಿಸುವ ನೆಪದಲ್ಲಿ ಬಡವರನ್ನು ಕಬಳಿಸಿದರೆ ಇದೆಂಥಾ ರಕ್ಷಣಾ ಇಲಾಖೆ?

ರಾಜೀವ್‌ಗಾಂಧಿಯವರು ಸೀಬರ್ಡ್ ನೌಕಾನೆಲೆಗೆ ಸಾವಿರದ ಒಂಬೈನೂರ ಎಂಬತ್ತಾರರಲ್ಲಿ ಶಿಲಾನ್ಯಾಸ ಮಾಡುತ್ತಾ ಒಬ್ಬನೇ ಒಬ್ಬ ರೈತನ ಕಣ್ಣಲ್ಲಿ ನೀರು ಹಾಕಿಸುವುದಿಲ್ಲ ಎಂದು ಭಾವಾವೇಶದ ಭಾಷಣ ಮಾಡಿದ್ದರು. ಇಪ್ಪತ್ತೆಂಟು ವರ್ಷಗಳ ನಂತರವೂ ಅವರಿಗೆ ಪರಿಹಾರ ದೊರಕದೆ ಕಣ್ಣೀರಿನ ಜೊತೆಗೆ ರಕ್ತವೂ ಇಂಗಿಹೋದಂತಾಗಿದೆ. ಸೇನೆಯಂತಯೇ ರಕ್ಷಣಾ ಇಲಾಖೆಯೂ ನಿರ್ದಯಿಯಾಗಿರುತ್ತದೆ ಎಂಬುದಕ್ಕೆ ಸಾಕ್ಷಿ ಅದು ಒಂದು ಗುಂಟೆ ಭೂಮಿಗೆ ಕೇವಲ ನೂರೈವತ್ತು ರೂಪಾಯಿ ಕೊಡಲು ಮುಂದಾಗಿದ್ದು! ಈ ಹಣಕ್ಕೆ ಒಂದು ಕೇಜಿ ಒಳ್ಳೆಯ ಮೀನೂ ದೊರಕುವುದಿಲ್ಲ. ಆದರೆ ಸ್ಥಳೀಯ ಕೋರ್ಟ್ ಇದನ್ನು ಖಂಡಿಸಿ ಗುಂಟೆಗೆ ಹನ್ನೊಂದೂವರೆ ಸಾವಿರ ರೂಪಾಯಿಗಳನ್ನು ಕೊಡಬೇಕೆಂದು ತೀರ್ಪಿತ್ತಿತು. ಇದನ್ನು ಹೈಕೋರ್ಟ್ ಮತ್ತು ಸುಪ್ರೀಂಗಳು ಎತ್ತಿ ಹಿಡಿದವು. ಅನ್ಯಾಯವನ್ನು ಸುಪ್ರೀಂ ಸನ್ನಿಧಿಗೆ ಒಯ್ದು ಜಯಶೀಲರಾದವರು ಸತೀಶ್‌ಸೈಲ್ ಮತ್ತು ದೇವದತ್ ಕಾಮತ್. ಭೂಮಿ ಕಳೆದುಕೊಂಡವರು ನಾಲ್ಕು ಸಾವಿರಕ್ಕೂ ಹೆಚ್ಚು ಮಂದಿ. ಅದರಲ್ಲಿ ಒಂದು ಎಕರೆಗಿಂತ ಕಡಿಮೆ ಭೂಮಿ ಉಳ್ಳವರೇ ಬಹಳ ಮಂದಿ. ಸುಪ್ರೀಂ ಕೋರ್ಟ್ ಆದೇಶವನ್ನು ಉಲ್ಲಂಘಿಸಿ ರಕ್ಷಣಾ ಇಲಾಖೆಯ ಡಿಫೆನ್ಸ್ ಎಸ್ಟೇಟ್ ಅಧಿಕಾರಿ ನಿರ್ಲಜ್ಜರಾಗಿ, ನಿಷ್ಕರುಣೆಯಿಂದ ಕುಳಿತುಬಿಟ್ಟಿದ್ದಾರೆ. ಎಂಟುನೂರು ಕೋಟಿ ಪರಿಹಾರ ನೀಡಬೇಕಾದ ವ್ಯಾಜ್ಯದಲ್ಲಿ ಐವತ್ತು ಕೋಟಿಗಳನ್ನಷ್ಟೇ ಕಡಲೆಪುರಿಯಂತೆ ಹಂಚಿ ಸುಮ್ಮನಾಗಿದ್ದಾರೆ. ನ್ಯಾಯಾಂಗ ನಿಂದನೆಯ ಅರ್ಜಿಗಳೂ ದೂಳು ಕುಡಿಯುತ್ತಿವೆ. ಹೋರಾಡಲು ರೈತರ ಬಳಿ ಹಣವಿಲ್ಲ, ಸಂಘಟನೆಯಿಲ್ಲ, ಅರಿವಿಲ್ಲ. ಸೈನ್ಯವೆಂಬ ಬೆದರು ಬೊಂಬೆಯ ಭಯ. ರೈತರ ಪರ ನಿಲ್ಲಬೇಕಾದ ಜಿಲ್ಲಾಧಿಕಾರಿಗಳಲ್ಲಿ, ಅತುಲ್‌ಕುಮಾರ್ ತಿವಾರಿಯಂಥ ಕೆಲವು ರಾಷ್ಟ್ರಭಕ್ತರು, ರೈತರಿಗೆ ಲಾಠಿ ಬೀಸಿ ಗುಡಿಸಲಿನಿಂದ ಎಳೆದು ಬಿಸಾಕಿ ಭೂಮಿ ಕಬಳಿಸಿದ ಕರಾಳಕಥೆಯನ್ನು ಅದರ ಹಸಿಗಾಯಗಳನ್ನು ರೈತರು ಈಗಲೂ ನೆನಪಿಸಿಕೊಂಡು ಬೆಚ್ಚಿಬೀಳುತ್ತಾರೆ.

ದೇಶಕ್ಕೆ ನೌಕಾನೆಲೆ ಮುಖ್ಯ. ಆದರೆ ಬಡವನಿಗೆ ತುಂಡು ಭೂಮಿ ಮುಖ್ಯ. ನೌಕಾನೆಲೆ ಅತಿಮುಖ್ಯ ಎನ್ನುವುದಾದರೆ ಬಡವನಿಗೆ ಪರ್ಯಾಯ ಭೂಮಿ ನೀಡಬಾರದೆ? ಅವನ ಕುಟುಂಬಕ್ಕೊಂದು ಉದ್ಯೋಗ ನೀಡಬಾರದೇ? ಈ ಉದ್ಯೋಗಪರ್ವವನ್ನು ಬಿಚ್ಚಿ ನೋಡಿದರೆ ಕರ್ಮಕಾಂಡವೇ ಗೋಚರವಾಗುತ್ತದೆ. ಕೆಳವರ್ಗದ ಹುದ್ದೆಗಳಲ್ಲಿ ಸ್ಥಳೀಯರಿಗೆ ಆದ್ಯತೆ ನೀಡಬೇಕೆಂಬ ನಿಯಮವಿದೆ. ಇದನ್ನು ಕೊಂಕಣ ರೈಲ್ವೆ ಅಕ್ಷರಶಃ ಪಾಲಿಸಿದೆ. ಕಾರವಾರದ ಸೀಬರ್ಡ್ ನೌಕಾನೆಲೆಗೆ ಕನ್ನಡಿಗರೆಂದರೆ ಅಸ್ಪೃಶ್ಯರು. ಆಯ್ಕೆಗಾಗಿ ನಡೆಸುವ ಪರೀಕ್ಷಾ ಕೇಂದ್ರಗಳನ್ನು ಕಾರವಾರದಲ್ಲಿ ಕನ್ನಡದಲ್ಲಿ ನಡೆಸುವುದರ ಬದಲು ಮುಂಬೈನಲ್ಲಿ ಹಿಂದಿಯಲ್ಲಿ ನಡೆಸಲಾಗುತ್ತದೆ. ಉತ್ತರ ಭಾರತೀಯರನ್ನು ತುಂಬಿಕೊಳ್ಳುವುದೇ ಇದರ ಹಿಂದಿನ ಉದ್ದೇಶ. ಅಥವಾ ಗುತ್ತಿಗೆದಾರರಿಗೆ ವಹಿಸಿ ಹಿಂದಿ ಬಲ್ಲವರನ್ನೇ ಆರಿಸಿಕೊಳ್ಳಲಾಗುತ್ತದೆ. ಕೇರಳದಲ್ಲಿರುವ, ಮಹಾರಾಷ್ಟ್ರಗಳಲ್ಲಿರುವ ನೌಕಾನೆಲೆಗಳಲ್ಲಿ ಶೇಕಡಾ ತೊಂಬತ್ತರಷ್ಟು ಉದ್ಯೋಗವನ್ನು ಆಯಾ ಭಾಷಿಕರಿಗೇ ನೀಡಲಾಗಿದೆ. ಕರ್ನಾಟಕದ ಕಾರವಾರದಲ್ಲಿರುವ ಸೀಬರ್ಡ್ ನೌಕಾನೆಲೆಯಲ್ಲಿ ಕನ್ನಡಿಗರು ಸಿಕ್ಕರೆ, ಕನ್ನಡದ ಮಾತು ಕೇಳಿಸಿದರೆ ನಿಮ್ಮ ಪುಣ್ಯ. ಎಂದೋ ಸಂಭವಿಸುವ ಯುದ್ಧಕ್ಕಾಗಿ ಸನ್ನದ್ಧವಾಗಿರಬೇಕಾದ ನೌಕಾಪಡೆ ಸದಾ ಸುಸಜ್ಜಿತವಾಗಿರಬೇಕಾದದ್ದು ಸರಿಯೇ. ಆದರೆ ನೆಲದ ಮಕ್ಕಳನ್ನು ಅವಮಾನಿಸುವ ಹಕ್ಕು ಇವರಿಗೇನಿದೆ? ಕಾರವಾರ ನಗರಕ್ಕೆ ಆಗಾಗ ವಕ್ಕರಿಸುವ ನೌಕಾನೆಲೆಯ ಸಿಬ್ಬಂದಿ ಉದ್ಧಟತನದಿಂದ ನಡೆದುಕೊಳ್ಳುತ್ತಾರೆ ಎಂಬುದು ಸ್ಥಳೀಯರ ಆಕ್ರೋಶ. ಪೊಲೀಸರಿಗೆ ಹೆದರದ ಇವರು ಸಭ್ಯತೆಯ ಎಲ್ಲೆ ಮೀರಿ ನಡೆದುಕೊಂಡ ಘಟನೆಗಳು ಅನೇಕ. ನ್ಯಾಯಾಂಗದ ಆದೇಶ ಹೊತ್ತ ಪೊಲೀಸ್ ಅಧಿಕಾರಿ ಕೂಡಾ ನೌಕಾನೆಲೆಗೆ ಪ್ರವೇಶಿಸಲು ಅಂಜುವ ಪರಿಸ್ಥಿತಿ ಇದೆ. ಈ ನೌಕಾನೆಲೆಯನ್ನು ಹಲವು ಬಾರಿ ನೋಡಿ ಬಂದಿರುವ ನನಗೆ ಇಂಥ ಸುಸಜ್ಜಿತ ನೆಲೆಯ ಬಗ್ಗೆ ಅಭಿಮಾನವೆನ್ನಿಸಿದರೂ ಇಲ್ಲಿನ ಭ್ರಷ್ಟಾಚಾರ, ಒಣ ಶಿಷ್ಟಾಚಾರ, ಪಂಚತಾರಾ ಸಂಸ್ಕೃತಿಯ ಹೊಲಸು ಪ್ರದರ್ಶನ, ಸ್ಥಳೀಯ ಭಾಷಿಕರ ಬಗೆಗಿನ ಅನಾದರ, ಕೈ ಕೆಳಗಿನವರನ್ನು ಹೀನಾಯವಾಗಿ ನಡೆಸಿಕೊಳ್ಳುವ ವರ್ತನೆ ಅಕ್ಷಮ್ಯ ಎನಿಸುತ್ತದೆ. ಪೊಲೀಸ್ ಇಲಾಖೆಯ ಪ್ರೋಟೊಕಾಲ್‌ಗಳು, ಅದರ ಹಿರಿಯಣ್ಣನಿಂತಿರುವ ಸೇನೆಯಲ್ಲಿ ಸಾವಿರ ಪಟ್ಟು ಹೆಚ್ಚಾಗಿವೆ. ಪೊಲೀಸರು ನ್ಯಾಯಾಲಯಕ್ಕಾದರೂ ಅಂಜುತ್ತಾರೆ. ಕಾನೂನು, ಸಂವಿಧಾನಗಳಿಗೆ ಅತೀತವಾಗಿರುವಂತೆ ನಡೆದುಕೊಳ್ಳುವ ಸೇನಾವ್ಯವಸ್ಥೆ ಯಾರಿಗೂ ಅಂಜದ ಭಂಡತಯನ ಬೆಳೆಸಿಕೊಂಡಿದೆ.

ಕರ್ನಾಟಕದ ಎಲ್ಲ ಜಿಲ್ಲೆಗಳ ಜತೆಗೂ ನನಗೆ ಒಂದಿಲ್ಲೊಂದು ನಂಟಿದೆ. ಈ ನಂಟು ಹೆಚ್ಚಿಗೆ ಇರುವುದ ಉತ್ತರ ಕನ್ನಡ ಜಿಲ್ಲೆಯ ಜೊತೆಗೆ. ಒಂದು ಕಾಲಕ್ಕೆ ಕಾರವಾರದಲ್ಲಿ ಪಿಯುಸಿ ಕಲಿಯುತ್ತಿದ್ದೆ. ಶಿವರಾಮ ಕಾರಂತರು ಲೋಕಸಭೆಗೆ ಚುನಾವಣೆಗೆ ಸ್ಪರ್ಧಿಸಿದ್ದಾಗ ಈ ಜಿಲ್ಲೆಯ ಹಳ್ಳಿಹಳ್ಳಿಗಳನ್ನೂ ನೋಡುವ ಅವಕಾಶ ಲಭಿಸಿತ್ತು. ಕಲೆ, ಸಾಹಿತ್ಯ, ಜನಪದ, ರಾಜಕಾರಣ, ಆಡಳಿತ, ಪತ್ರಿಕೋದ್ಯಮ ಎಲ್ಲ ಕ್ಷೇತ್ರಗಳಲ್ಲೂ ದೊಡ್ಡದನ್ನು ಸಾಧಿಸಿರುವವರ ಸಂಖ್ಯೆ ಈ ಜಿಲ್ಲೆಯಲ್ಲಿ ಬಹಳಷ್ಟಿದೆ. ಆದರೆ ಅವರೆಲ್ಲ ಸಂಘಟಿತರಾಗಿ, ಸಾಂಸ್ಥಿಕರೂಪದಲ್ಲಿ ಜಿಲ್ಲೆಯ ಜ್ವಲಂತ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವ ಪ್ರಯತ್ನ ಮಾಡಿಲ್ಲ. ಊರು ಬಿಟ್ಟು ಬಂದವರಿಗೆ ಊರಿನ ನೆನಪಿಲ್ಲ. ನೆನಪಿದ್ದವರಿಗೆ ಸಮಸ್ಯೆಗಳಿಗೆ

ಸ್ಪಂದಿಸಲು ಬಿಡುವಿಲ್ಲ. ಬಿಡುವಿದ್ದವರಿಗೆ ಹೋರಾಟವನ್ನು ಕುರಿತು ವ್ಯಂಗ್ಯ, ಉಡಾಫೆಯ ಧೋರಣೆಗಳಿವೆ. ಕಾರವಾರದ ದೈನಿಕ ಕರಾವಳಿ ಮುಂಜಾವು ಪತ್ರಿಕೆಯ ಗಂಗಾಧರ ಹಿರೇಗುತ್ತಿ ಆರಂಭದಿಂದಲೂ ಪರಿಸರ ರಕ್ಷಣೆಯ ಹೋರಾಟದಲ್ಲಿ ಮುಂಚೂಣಿಯಲ್ಲಿದ್ದಾರೆ. ವಕೀಲರಾದ ನಾಗರಾಜ ವಿ.ನಾಯಕ್ ಸೀಬರ್ಡ್ ನೌಕಾನೆಲೆಯ ನಿರಾಶ್ರಿತರನ್ನು, ಸಂಘಟಿಸಿ ಬೆಂಗಳೂರಿಗೆ ಕರೆತಂದಿದ್ದರು. ಆದರೆ ಬೆಂಗಳೂರಿನಲ್ಲಿ ಖ್ಯಾತನಾಮರಾಗಿರುವ, ವಿವಿಧ ಕ್ಷೇತ್ರಗಳಲ್ಲಿ ಪ್ರಭಾವಿಗಳಾಗಿರುವ ಉತ್ತರ ಕನ್ನಡ ಜಿಲ್ಲೆಯ ಅನೇಕ ಗಣ್ಯರು ಈ ಪ್ರತಿಭಟನಾ ಸಭೆಗೆ ಆಹ್ವಾನವಿದ್ದರೂ ಬಂದಿರಲಿಲ್ಲ. ದೊರೆಸ್ವಾಮಿಯವರ ನಾಯಕತ್ವದಲ್ಲಿ ಮುಖ್ಯಮಂತ್ರಿಗಳಿಗೆ ಮನವಿಪತ್ರ ಕೊಡಲಾಗಿದೆ. ಕೇಂದ್ರ ಸರ್ಕಾರದ ರಕ್ಷಣಾ ಇಲಾಖೆಯ ಈ ಅನ್ಯಾಯವನ್ನು ಸರಿಪಡಿಸಲು, ಮಧ್ಯಪ್ರವೇಶ ಮಾಡಲು ಕೋರಲಾಗಿದೆ. ತಮ್ಮ ಶಕ್ತಿ ಮೀರಿ ಏನು ಮಾಡಲು ಸಾಧ್ಯವೋ ಅಷ್ಟನ್ನೂ ಮುಖ್ಯಮಂತ್ರಿಗಳು ತಕ್ಷಣ ಮಾಡಬೇಕು. ಕಾಗೇರಿಯಂಥವರಿಗೆ ಜಿಲ್ಲೆಯ ಸಮಸ್ಯೆಗಳನ್ನು ಪರಿಹರಿಸುವುದಕ್ಕಿಂತ, ಜಿಲ್ಲೆಯನ್ನು ಹೋಳು ಮಾಡುವುದರಲ್ಲೇ ಆಸಕ್ತಿ ಇದೆ ಎಂಬುದು ಉತ್ತರ ಕನ್ನಡ ಜಿಲ್ಲೆಯ ಕೆಲವು ಜನರ ಅನಿಸಿಕೆ. ಸಿರ್ಸಿ ಪಟ್ಟಣದ ಮುನಿಸಿಪಾಲಿಟಿಯಾಚೆಗೆ ಅವರ ವರ್ಚಸ್ಸಿಲ್ಲ ಎಂಬುದು ಅವರ ದಕ್ಷತೆಯ ಬಗೆಗಿನ ಸ್ಥಳೀಯ ಟೀಕೆಗಳು. ದೇಶಪಾಂಡೆಯವರು ಹಾರಿಕೆ ಉತ್ತರ ಹೇಳುವಲ್ಲಿ ನಿಷ್ಣಾತರು ಎಂಬ ಆರೋಪ. ಈಗಿರುವ ನಾಗರಾಜ್ ನಾಯಕ್‌ರ ಹೋರಾಟ ಸಮಿತಿ ರಾಜಕೀಯೇತರವಾದದ್ದು, ಪಕ್ಷಾತೀತವಾದದ್ದು. ಅದು ನಿಜ ಎನಿಸಿದರೆ ಎಲ್ಲ ಕೂಡಿ ಈ ಹೋರಾಟವನ್ನು ಮುಂದುವರಿಸಿ ಯಶಸ್ವಿಗೊಳಿಸಲು ಇದು ಸಕಾಲ.


ನೌಕಾನೆಲೆ ನಿರಾಶ್ರಿತರ ಬೇಡಿಕೆಗಳೇನೂ ಬೆಟ್ಟದಂಥವುಗಳಲ್ಲ. ಅವುಗಳು ಸಹಜವಾಗಿವೆ ಮತ್ತು ಸರಳವಾಗಿವೆ. ಅವುಗಳನ್ನು ಸಂಗ್ರಹಿಸಿ ದಾಖಲಿಸುವುದಾದರೆ ಭೂಹೀನರಿಗೆ ಒಂದೇ ಬಾರಿಗೆ ಪರಿಹಾರ ನೀಡಿ ವಿವಾದ ಮುಕ್ತಾಯಗೊಳಿಸಬೇಕು. ನಕಲಿ ಭೂಹೀನರಿಗೆ ಉದ್ಯೋಗ ಕೊಡುವುದನ್ನು ತಪ್ಪಿಸಿ ನಿಜವಾದ ಬಲಿಪಶುಗಳಿಗೆ ಉದ್ಯೋಗ ಸಿಗಬೇಕು. ಗುತ್ತಿಗೆ ಆಧಾರದ ನೇಮಕಾತಿ ನಿಲ್ಲಬೇಕು. ನಿರಾಶ್ರಿತ ಐ.ಟಿ.ಐ ಗಳಿಗೆ ನೌಕಾನೆಲೆಯಲ್ಲಿ ಅಪ್ರೆಂಟಿಸ್ ಕೋರ್ಸ್‌ಗೆ ಪ್ರವೇಶ ನೀಡಬೇಕು. ನಿರಾಶ್ರಿತರಲ್ಲಿ ಹೆಚ್ಚು ಮಂದಿ ಹಿಂದುಳಿದ ವರ್ಗ ಮತ್ತು ದಲಿತರೆಂಬುದನ್ನು ಗಮನಿಸಬೇಕು.

ಕಾರವಾರ ನಗರವನ್ನು ಪ್ರವೇಶಿಸುತ್ತಿದ್ದಂತೆ ಎಡಬದಿಗೆ ಮಹಾಗೋಡೆಯೊಂದು ಸಂಚರಿಸುತ್ತದೆ; ಎಚ್ಚರಿಸುತ್ತದೆ. ಗೋಡೆಯ ಹಿಂದಿರುವ ಮಾಯಾ ನಗರಿ ಸೀಬರ್ಡ್ ಬಡವರ ಕಣ್ಣೀರಿನ ಕಥೆ ಹೇಳುತ್ತದೆ. ಕನ್ನಡಿಗ ಜಾರ್ಜ್ ಫರ್ನಾಂಡಿಸ್ ದೂರದೃಷ್ಟಿ ದೂರದೃಷ್ಟಿ ಮತ್ತು ಸದುದ್ದೇಶದಿಂದ ಅಂಕಿತ ಹಾಕಿದ ಯೋಜನೆ, ನೆಲದ ಮಕ್ಕಳಿಗೆ ಮುಳುವಾಗಿದೆ. ಸಾವಿರಾರು ಕೋಟಿ ಯೋಜನೆಯ ಸೀಬರ್ಡ್‌ಗೆ ಅಲ್ಲಿನ ಮೂಲನಿವಾಸಿಗಳಿಗೆ ಪರಿಹಾರ ಕೊಡುವುದು ಕಷ್ಟವೇನಲ್ಲ. ಇಲ್ಲವಾದರೆ ಈ ಗೋಡೆ, ಎಲ್ಲ ಗೋಡೆಗಳಂತೆ ಸಮಾಜವನ್ನು ಸೀಳಿ ಹಾಕಿ ಗೋಡೆಯ ಅತ್ತ ಕಡೆ ಐಷಾರಾಮಿಗಳೂ, ಗೋಡೆಯ ಇತ್ತ ಕಡೆ ಬಂದೂಕು ಹಿಡಿದ ನಕ್ಸಲರೂ ಹುಟ್ಟಿಕೊಳ್ಳಲು ಅನುವು ಮಾಡಿಕೊಟ್ಟಂತಾಗುತ್ತದೆ ಮತ್ತು ಇದಕ್ಕೆ ಸರ್ಕಾರವೇ ಕಾರಣೀಭೂತವಾದಂತಾಗುತ್ತದೆ.

(ಸಾಭಾರ ಪ್ರಜಾವಾಣಿ)

ನನ್ನ ತಾತನನ್ನು ನಾ ಕಂಡಂತೆ

– ಎಸ್.ಎನ್.ಗಿರೀಶ್


ಶ್ರೀ.ತಿ.ಸುಬ್ಬರಾಯರು

(ಈ ಲೇಖನದ ಲೇಖಕ ಪ್ರಸ್ತುತ ಒಡಿಸ್ಸಾ ಮೈನಿಂಗ್ ಕಾರ್ಪೋರೇಷನ್ನಿನ ನಿರ್ದೇಶಕರ ಕರ್ತವ್ಯದಲ್ಲಿದ್ದಾರೆ. ಈ ಮೊದಲು ಕಟಕ್ ಜಿಲ್ಲಾಧಿಕಾರಿಯಾಗಿದ್ದರು. ತಮ್ಮ ಜನಪರ ಸೇವೆಯ ಕಾರಣದಿಂದ "ಗರೀಬೊಂಕಾ ಠಾಕೂರ್" ಎಂದೇ ಪ್ರಸಿದ್ಧರಾಗಿದ್ದಾರೆ.– ಸಂ.)

ಬಹುಮುಖವಾದ ವ್ಯಕ್ತಿತ್ವವನ್ನು ಸಾಧಿಸಿ ಶ್ರೇಷ್ಠ ಜೀವನವನ್ನು ನಡೆಸಿದ ನನ್ನ ತಾತ ಶ್ರೀ.ತಿ.ಸುಬ್ಬರಾಯರು ಬಹುಶ್ರುತರಾಗದಿದ್ದುದಕ್ಕೆ ಅವರ ಸಂಕೋಚದ ಸ್ವಭಾವ ಹಾಗೂ ವಿನಯಶೀಲತೆಗಳೇ ಕಾರಣ. ಭಾಷೆ ಹಾಗೂ ಸಾಹಿತ್ಯಕ್ಕೆ ಸಂಬಂಧಿಸಿದಂತೆ ಸುಬ್ಬರಾಯರದು ಅಪರೂಪದ ಸಾಧನೆ. ಏಕೆಂದರೆ ಭಾಷಿಕ, ಸೃಜನಶೀಲ, ವಿಮರ್ಶಾತ್ಮಕ, ಅನುವಾದಕ ಮತ್ತು ಬೋಧಕ ಪ್ರತಿಭೆಗಳ ಸಮಗ್ರ ವಿಕಾಸವನ್ನು ಒಬ್ಬನೇ ವ್ಯಕ್ತಿಯಲ್ಲಿ ಕಾಣುವುದು ಅಪರೂಪವೇ ಸರಿ. ಅಲ್ಲದೆ, ತಮ್ಮ ವ್ಯಕ್ತಿತ್ವವನ್ನು ಜನಪರ ನೆಲೆಗಟ್ಟಿನ ಮೇಲೆ ಕಟ್ಟಿಕೊಂಡು, ಕರ್ತೃತ್ವ ಶಕ್ತಿಯನ್ನು ಮೆರೆದು ಶಿರಾ ಪ್ರಥಮ ದರ್ಜೆ ಕಾಲೇಜಿನಂತಹ ಸಂಸ್ಥೆಯನ್ನು ಸಬ್ಬರಾಯರು ಸಮಾಜಕ್ಕೆ ನೀಡಿದ್ದಾರೆ. ಪ್ರತಿಭಾಭಿವ್ಯಕ್ತಿ ಹಾಗೂ ಸಮಾಜಕಾರ್ಯಗಳ ಮೂಲಕ ಆತ್ಮಸಾಕ್ಷಾತ್ಕಾರ – ಇದು ಸುಬ್ಬರಾಯರ ವ್ಯಕ್ತಿತ್ವದ ಸಾರವಾಗಿತ್ತು ಅನ್ನಿಸುತ್ತದೆ. ನನ್ನ ತಾತ ಚಿನ್ನದ ಪದಕದೊಂದಿಗೆ ಪದವಿಗಳಿಸಿದರೂ ಶಿಕ್ಷಕ ವೃತ್ತಿಯನ್ನು ಆಯ್ದುಕೊಂಡದ್ದು "Teaching is a calling, not a profession" ಎಂಬ ಆದರ್ಶದಿಂದ. ರಾಷ್ಟ್ರನಿರ್ಮಾಣದಲ್ಲಿ ಶಿಕ್ಷಣಕ್ಕಿರುವ ಪ್ರಾಮುಖ್ಯವನ್ನು ("The destiny of a nation is shaped in its classrooms") ಅರಿತ ದೂರದೃಷ್ಟಿ, ಶಿಕ್ಷಕ ವೃತ್ತಿಗಾಗಿ ಪ್ರತಿಷ್ಠಿತ ವ್ಯಕ್ತಿಗಳ ಅವಕಾಶವನ್ನು ನಿರಾಕರಿಸಿದ ತ್ಯಾಗಮನೋಭಾವ, ಆಂಗ್ಲ ಸಾಹಿತ್ಯದೊಂದಿಗೆ ತದಾತ್ಮ್ಯ ಸಾಧಿಸಿದರೂ ನಮ್ಮ ಸಂಸ್ಕೃತಿ, ಸಮಸ್ಯಗಳ ಬಗ್ಗೆ ವಹಿಸಿದ ಜವಾಬ್ದಾರಿ, ಬರಪೀಡಿತ ಬಡ ಪ್ರದೇಶವಾದ ಸಿರಾದಲ್ಲಿ ವಿದ್ಯಾಭಿವೃದ್ಧಿಯ ಕೃಷಿ ಮಾಡಲು ತನ್ನ ಬೇರುಬೀಡಿಗೇ ಹಿಂದಿರುಗಿದ್ದು, ಆದರ್ಶದ ಕಾವನ್ನು ವೃತ್ತಿಜೀವನದಾದ್ಯಂತ ಕಾಯ್ದುಕೊಂಡು ಬಂದದ್ದು ಇವು ಇಂದಿನ ಸ್ಪರ್ಧಾತ್ಮಕ ಯುಗದ ಪೀಳಿಗೆಯವರಿಗೆ ಅಚ್ಚರಿ ಹುಟ್ಟಿಸುತ್ತದೆ. ಉದ್ಯೋಗಕ್ಕಾಗಿ ಡಿಗ್ರಿ ಎಂಬಂತಹ ಸ್ವಾರ್ಥ ರೂಢಮೂಲ ಮನೋಭಾವಕ್ಕೆ ಪಕ್ಕಾಗದೇ ತನ್ನ ವಿದ್ಯಾಗರಿಮೆಯನ್ನು ಸಮಷ್ಟಿಯ ಕಲ್ಯಾಣಕ್ಕಾಗಿ ವಿನಿಯೋಗಿಸುವ ನಿರ್ಧಾರ ತಳೆದ ನನ್ನ ತಾತನವರ ವ್ಯಕ್ತಿತ್ವ ಗಾಂಧೀಯುಗದ ನಾಯಕರ ಔನತ್ಯಕ್ಕೆ ಸಾಟಿಯಾಗುವಂಥದ್ದಾಗಿದೆ. ಶಿಕ್ಷಕವೃತ್ತಿಯ ಆದರ್ಶದಷ್ಟೆ ದೊಡ್ಡದು ಯೌವ್ವನದ ಎಳೆವಯಸ್ಸಿನಲ್ಲಿ ನಿರ್ಧಾರ ತಳೆವಾಗ ಸುಬ್ಬರಾಯರು ತೋರಿದ ಪಕ್ವತೆ ಮತ್ತು ದೃಢತೆ. ಆದರ್ಶವನ್ನು ಜೀವನಕ್ರಮವಾಗಿ ಒಗ್ಗಿಸಿಕೊಳ್ಳುವ ಪ್ರಕ್ರಿಯೆಯಲ್ಲಿ ಅವರು ಮಾಡಿದ ವೈಯಕ್ತಿಕ, ಕೌಟುಂಬಿಕ ತ್ಯಾಗಗಳನ್ನು

ಅವರ ನಿಕಟವರ್ತಿಗಳು ಮಾತ್ರ ಬಲ್ಲರು. ನನ್ನಲ್ಲಿ ಸಂವೇದನೆಗಳ ರೂಪದಲ್ಲಿದ್ದ ಸಾಮಾಜಿಕ ಕಾಳಜಿಯನ್ನು ದೃಷ್ಟಿಕೋನವನ್ನಾಗಿ, ವೃತ್ತಿಬದ್ಧತೆಯನ್ನಾಗಿ ಪರಿವರ್ತಿಸಿದ್ದು ತಾತನವರ ತ್ಯಾಗಶೀಲ ಜೀವನ.

ನನ್ನ ವ್ಯಕ್ತಿತ್ವದ ಬೆಳವಣಿಗೆಯಲ್ಲಿ, ಹಾಗೂ ಐ.ಎ.ಎಸ್‌ನ ಗುರಿಯನ್ನು ನಾನು ಸಾಧಿಸುವಲ್ಲಿ ನನ್ನ ತಾತನವರ ಆಶೀರ್ವಾದ, ಸ್ಫೂರ್ತಿ ಹಾಗೂ ಮಾರ್ಗದರ್ಶನಗಳು ವಹಿಸಿದ ಪಾತ್ರ ನನ್ನ ಮಟ್ಟಿಗೆ ಪ್ರಾತಃ ಸ್ಮರಣೀಯವಾದುದಾಗಿದೆ. ಎಸ್.ಎಸ್.ಎಲ್.ಸಿ. ಯಲ್ಲಿ ಶೇಕಡಾ ೯೩ರಷ್ಟು ಅಂಕಗಳಿಸಿದರೂ ಮುಂದಿನ ವಿದ್ಯಾಭ್ಯಾಸಕ್ಕಾಗಿ ನಾನು ಆಯ್ದುಕೊಂಡದ್ದು ಮಾನವಿಕ ವಿಷಯಗಳನ್ನು. ನನ್ನ ನಿರ್ಧಾರವನ್ನು ಬೆಂಬಲಿಸಿ ವ್ಯಕ್ತಿತ್ವ ಹಾಗೂ ವೃತ್ತಿಯನ್ನು ಕಟ್ಟಿಕೊಳ್ಳುವಲ್ಲಿ ಮಾನವಿಕ ವಿದ್ಯಾಭ್ಯಾಸ ಒದಗಿಸಬಲ್ಲ ಅವಕಾಶಗಳನ್ನು ಮನಗಾಣಿಸಿ ನಾನು ಆಯ್ದುಕೊಂಡ ಕ್ಷೇತ್ರದಲ್ಲಿ ಅತ್ಯುತ್ತಮ ಸಾಧನೆ ಮಾಡುವತ್ತ ಸ್ಫೂರ್ತಿ ಹಾಗೂ ಸಂಪನ್ಮೂಲಗಳನ್ನು ನನ್ನ ತಾತ ನನಗೆ ಒದಗಿಸಿದರು. ನನ್ನ ಸರ್ವತೋನ್ಮುಖ ಬೆಳವಣಿಗೆಯ ಬಗ್ಗೆ ವೈಯಕ್ತಿಕ ಗಮನ ನೀಡುವ ಮೂಲಕ ನಮ್ಮ ಶಿಕ್ಷಣ ವ್ಯವಸ್ಥೆಯಲ್ಲಿನ ಕೊರತೆಯನ್ನು ನನ್ನ ಮಟ್ಟಿಗೆ ತುಂಬಿದರು. ತಾವೇ ಬೌದ್ಧಿಕ ಸಿದ್ಧಿಯ ಶ್ರೇಷ್ಠ ಉದಾಹರಣೆಯಾಗಿದ್ದುದಲ್ಲದೆ ರಾಷ್ಟ್ರಕವಿ ಕುವೆಂಪು, ಪ್ರೊ// ಹಿರಿಯಣ್ಣ, ಪ್ರೊ// ತೀ.ನಂ.ಶ್ರೀರವರ ಕಾಲದ ಬೌದ್ಧಿಕ ಪರಂಪರೆಯನ್ನು ನನ್ನ ಪೀಳಿಗೆಗೆ ಹಾಯಿಸಿ ಸಾಂಸ್ಕೃತಿಕ ನಿರಂತರತೆಯನ್ನು ಕಾಪಾಡುವ ಕೊಂಡಿಯಾಗಿಯೂ ತಾತನವರು ನನಗೆ ಪ್ರಸ್ತುತರಾಗಿದ್ದರು. ಅವರಂತೆ ಮೈಸೂರಿನ ಮಹಾರಾಜ ಕಾಲೇಜಿನಂತಹ ಮಹತ್ ಸಂಸ್ಥೆಯ ವಿದ್ಯಾರ್ಥಿಯಾಗಿ ನಾನೂ ಆಂಗ್ಲ ಸಾಹಿತ್ಯದಲ್ಲಿ ಚಿನ್ನದ ಪದಕ ಗಳಿಸಿ ಸಾಧನೆಯನ್ನು ಪುನರಾವರ್ತಿಸಬೇಕೆಂಬ ಉತ್ಕಟ ಹಂಬಲದಿಂದ ನಾನು ಮಹಾರಾಜ ಕಾಲೇಜಿಗೆ ದಾಖಲಾದೆ. ಈ ರೀತಿ ನನ್ನ ಸಾಧನೆಗೆ ಗುರಿಯನ್ನು ನೀಡಿದ್ದಲ್ಲದೆ ಸಾಧನೆಯ ಹಾದಿಯನ್ನು ಸುಗಮವೂ ಸಮೃದ್ಧವೂ ಆಗುವಂತೆ ತಾತನವರು ಒತ್ತಾಸೆ ನೀಡಿದರು.

ಭಾಷೆಯ ಮೇಲೆ ಪ್ರಭುತ್ವ ಸಾಧಿಸುವ ಮೂಲಕ ನಮ್ಮ ವ್ಯಕ್ತಿತ್ವವನ್ನು ಎತ್ತರದ ನೆಲೆಯಲ್ಲಿ ಕಟ್ಟಿಕೊಳ್ಳುವ ಪರಿಯನ್ನು ನಾನು ತಾತನವರ ಮೂಲಕ ಕಂಡುಕೊಂಡೆ. ಆಂಗ್ಲಭಾಷಾ ವ್ಯಾಕರಣದಂತಹ ತಾಂತ್ರಿಕ ವಿಷಯದ ಮೇಲೆ ನಿಷ್ಠುರ ಪ್ರಭುತ್ವವನ್ನು ಸಾಧಿಸಿದಂತಯೇ ಭಾವ ಸಾಮ್ರಾಜ್ಯದ ಆರ್ದ್ರತೆಗೆ, ಅನಂತತೆಗೆ ಅರಳಿಕೊಂಡವರು ಸುಬ್ಬರಾಯರು. ಬುದ್ಧಿ – ಭಾವಗಳ ಉನ್ನತ ಹಾಗೂ ಸಮನ್ವಿತ ವಿಕಾಸವನ್ನು ಅವರಲ್ಲಿ ಕಾಣಬಹುದಾಗಿತ್ತು. ಅವರ ಕವನಗಳ ಅಭಿವ್ಯಕ್ತಿ ಸರಳ – ಸುಂದರ; ಆದರೆ ಅರ್ಥವ್ಯಕ್ತಿ ಗಹನ – ಗಂಭೀರ. ಸುಬ್ಬರಾಯರ ಜೀವನದೃಷ್ಟಿ ಹಾಗೂ ಸಾಹಿತ್ಯಗಳ ಮೂಲಧಾತುವೆಂದರೆ ಭಾರತದ ಆಧ್ಯಾತ್ಮಿಕ ಹಾಗೂ ತಾತ್ವಿಕ ಪರಂಪರೆಯ ಬಗ್ಗೆ ಅವರಿಗಿದ್ದ ಆಳವಾದ ಅರಿವು, ಅಭಿಮಾನ ಹಾಗೂ ಅವಿನಾಭಾವ ಬೆಸುಗೆ. ನಮ್ಮ ಪರಂಪರೆಯ ಬಗ್ಗೆ ಅವರಿಗಿದ್ದ ಅಭಿಮಾನ ವಿಮರ್ಶಾತ್ಮಕ ಹಾಗೂ ಚಿಕಿತ್ಸಕ ದೃಷ್ಟಿಗಳಿಂದ ಪರಿಷ್ಕೃತವಾಗಿತ್ತು ; ಶಿಕ್ಷಣರಂಗ ಮತ್ತು ಸಾಮಾಜಿಕ ಸೇವಾಕಾರ್ಯಗಳಲ್ಲಿ ಪ್ರಾಯೋಗಿಕ ಸಫಲತೆಯನ್ನು ಪಡೆದಿತ್ತು. ಅವರಲ್ಲಿ ನಾವು ಮುಖ್ಯವಾಗಿ ಕಾಣುತ್ತಿದ್ದ ಗುಣಗಳೆಂದರೆ ಯಾವುದೇ ವಿಷಯವನ್ನಾದರೂ ವಿವಿಧ ದೃಷ್ಟಿಕೋನಗಳಿಂದ ತಲಸ್ಪರ್ಶಿಯಾಗಿ ವಿವೇಚಿಸುವ ಬೌದ್ಧಿಕ ಪ್ರಖರತೆ, ತನ್ನ ದೃಷ್ಟಿಕೋನವನ್ನು ಅಧಿಕಾರಯುತವಾಗಿ ಮಂಡಿಸಬಲ್ಲ ಸಂವಹನಾಸುಭಗತೆ, ಪೂರ್ವಾಗ್ರಹವಿಲ್ಲದೆ ಸಿದ್ಧಮಾದರಿಗಳಿಗೆ ಜೋತುಬೀಳದೇ ನವನವೋನ್ಮೇಷಶಾಲಿಯಾಗಿ ವಿಚಾರಗಳನ್ನು ಶೋಧಿಸುವ ಸ್ವಾಯತ್ತತೆ, ಪರಿಪೂರ್ಣತೆಯನ್ನು ಸಾಧಿಸುವತ್ತ ಅವಿರತ ಪರಿಶ್ರಮ ಹೂಡುವ ನಿರಂತರ ಜೀವನೋತ್ಸಾಹ, ವಯಸ್ಸಿನ ದಾಳಿಗೆ ದುರ್ಬಲವಾಗದ ಜ್ಞಾನದಾಹ ಹಾಗೂ

ಸೌಂದರ್ಯಾಭೀಪ್ಸೆ ಮತ್ತು ಪ್ರತಿಭೆಯನ್ನು ಕಂಡೊಡನೆ ಅದಕ್ಕೆ ನೀರೆರೆದು ಪೋಷಿಸುವ ಆದರ ದೃಷ್ಟಿ. ತಮ್ಮ ಸಾಹಿತ್ಯ ಸೃಷ್ಟಿಯಲ್ಲಿ ಲಿಪಿಕಾರನನ್ನಾಗಿ ನನ್ನನ್ನೂ ತೊಡಗಿಸಿಕೊಳ್ಳುವ ಮೂಲಕ ಸಾಹಿತ್ಯಾಭಿರುಚಿ, ಸೂಕ್ಷ್ಮತೆಗಳನ್ನು ನನ್ನಲ್ಲಿ ತಾತ ಪೋಷಿಸಿದರು. ಐ.ಎ.ಎಸ್ ಪರೀಕ್ಷೆಗಾಗಿ ನಾನು ಕನ್ನಡ ಸಾಹಿತ್ಯವನ್ನು ಐಚ್ಛಿಕ ವಿಷಯವನ್ನಾಗಿ ಆಯ್ದುಕೊಂಡಾಗ ನನ್ನ ತಯಾರಿಯ ಆಧಾರ ಸ್ತಂಭವಾಗಿದ್ದರು ನನ್ನ ತಾತ. ಪಠ್ಯಪುಸ್ತಕಗಳನ್ನು ಸಂಗ್ರಹಿಸುವುದರಿಂದ ಹಿಡಿದು, ಟಿಪ್ಪಣಿಗಳನ್ನು ತಯಾರಿಸಿಕೊಳ್ಳುವವರೆಗೆ, ಕ್ಲಿಷ್ಟ ಭಾಗಗಳನ್ನು ಬೋಧಿಸುವ ವರೆಗೆ ಅವರ ಸಹಾಯ ಹಸ್ತ ನನ್ನನ್ನು ತಿದ್ದಿ ತೀಡಿತು. ನನ್ನ ಜೀವನವನ್ನು ದರಿದ್ರ ನಾರಾಯಣನ ಸೇವೆಯಲ್ಲಿ ಸವೆಸಿ ಸಾರ್ಥಕಗೊಳಿಸಿಕೊಳ್ಳುವುದೇ ನನ್ನ ಪ್ರೀತಿಯ ತಾತನಿಗೆ ನಾನು ನೀಡಬಹುದಾದ ಭಾವಗರ್ಭಿತ ಶ್ರದ್ಧಾಂಜಲಿ ಎಂದು ಭಾವಿಸಿಕೊಂಡಿದ್ದೇನೆ.

ಸಾಹಿತ್ಯ ಕಾರ್ಯಗಳು:ಶ್ರೀ.ತಿ.ಸುಬ್ಬರಾಯರು ಕನ್ನಡದ ಒಬ್ಬ ಶ್ರೇಷ್ಠ ಸಾಹಿತಿಗಳು. ಅವರ ಸಂಕೋಚದ ಸ್ವಭಾವ ಮತ್ತು ವಿನಯಶೀಲತೆಯ ದೆಸೆಯಿಂದ ಅವರ ಕೃತಿಗಳು ಹೆಚ್ಚು ಓದುಗರ, ಸಾಹಿತಿಗಳ ಮತ್ತು ಸುಗಮಸಂಗೀತಗಾರರ ಗಮನಕ್ಕೆ ಬರದೇ ಇರುವುದು ಕನ್ನಡಿಗರ ದೌರ್ಭಾಗ್ಯವೆಂದೇ ಹೇಳಬೇಕಾಗಿದೆ. ಇವರು, "ಪಾನಕ – ಪನಿವಾರ", "ಶಿವದಾನ", ಚಂದ್ರಶೇಖರ ಕಂಬಾರರ ಮೆಚ್ಚುಗೆಯ ಮುನ್ನುಡಿಯನ್ನುಳ್ಳ "ಪಂಪ ಪ್ರಗಾಥ ಮತ್ತು ಇತರ ಕವನಗಳು" ಎಂಬ ಮೂರು ಸ್ವರಚಿತ ಕವನ ಸಂಗ್ರಹಗಳು, ಬರಗೂರು ರಾಮಚಂದ್ರಪ್ಪನವರ ಸುದೀರ್ಘ ಮುನ್ನುಡಿಯನ್ನುಳ್ಳ "ಕುರುಡು ಕಾಂಚಾಣ ಮತ್ತು ಇತರ ಸಣ್ಣ ಕತೆಗಳು" ಎಂಬ ಸ್ವರಚಿತ ಸಣ್ಣ ಕತೆಗಳ ಸಂಗ್ರಹ, "ಎರಡು ಏಕಾಂಕ ನಾಟಕಗಳು" ಎಂಬ ಕೃತಿ, "ಫ್ರೆಂಚ್ ಸುಂದರಿಯೊಡನೆ ಪಂಪಾತೀರದಲ್ಲಿ" ಎಂಬ ಕಿರು ಕಾದಂಬರಿ, "ಬ್ರಹ್ಮ ಜಿಜ್ಞಾಸಾ"ಎಂಬ ಆಧ್ಯಾತ್ಮಿಕ ಕೃತಿ ಮತ್ತು "ವಾಲ್ಮೀಕಿ ರಾಮಾಯಣದ ನುಡಿ ಮುತ್ತುಗಳು" ಎಂಬ ಗ್ರಂಥಗಳನ್ನು ಕನ್ನಡಿಗರಿಗೆ ಕಾಣಿಕೆಯಾಗಿ ನೀಡಿದ್ದಾರೆ. ಇವುಗಳಲ್ಲದೆ, "ಸೀತಾರಾಮರ ಪ್ರಕೃತಿಪ್ರೇಮ" ಎಂಬ ಕೃತಿ, "ಯಾಡಿ ಮತ್ತು ಯಾಜ್ಞವಲ್ಕ್ಯ" ಎಂಬ ಕಾದಂಬರಿ ಹಾಗೂ "ಕನ್ನಡ ಗೋವಿನ ಕಥೆಯ ಉಗಮ ಮತ್ತು ವೈಶಿಷ್ಟ್ಯ" ಎಂಬ ಕಿರುಹೊತ್ತಿಗೆ – ಇವುಗಳು ಅಚ್ಚಿಗೆ ಸಿದ್ಧವಾಗುತ್ತಿವೆ.

ಇವರು ಕನ್ನಡ ಭಾಷೆ ಮತ್ತು ಸಾಹಿತ್ಯಗಳಲ್ಲಿ ಪರಿಣತಿಯನ್ನು ಪಡೆದಿರುವಂತೆಯೇ ಆಂಗ್ಲ ಭಾಷೆ ಮತ್ತು ಸಾಹಿತ್ಯಗಳಲ್ಲಿಯೂ ಪರಿಣತಿಯನ್ನು ಪಡೆದಿರುವುದು ಒಂದು ವಿಶೇಷವೇ ಸರಿ. ಇವರು ಹೆಸರಾಂತ ಕಾದಂಬರಿಕಾರರಾದ ಶ್ರೀಮಾನ್ ಎಸ್.ಎಲ್.ಭೈರಪ್ಪನವರ ಕಾದಂಬರಿಗಳ ಮೇಲೆ ಶ್ರೇಷ್ಠ ನಿಬಂಧ(These) ವನ್ನು ಬರೆದು ಡಾಕ್ಟರೇಟ್‌ಗಳಿಸಿರುವ ಡಾ//ನಾಗರಾಜ್ ನೀರಗುಂದರವರ "ಅರ್ಥ" ಎಂಬ ಮುನ್ನೂರೈವತ್ತು ಪುಟಗಳ ಜನಪ್ರಿಯ ಕಾದಂಬರಿಯನ್ನು ಆಂಗ್ಲಭಾಷೆಗೆ ಅನುವಾದಿಸಿದ್ದಾರೆ. ಇವರು ಸಿದ್ಧಪುರುಷರಾದ ಯೋಗಿವರ್ಯ ಶ್ರೀಮುಕುಂದೂರು ಸ್ವಾಮಿಗಳವರ ಜೀವನದ ಕೆಲವು ಘಟನೆಗಳು ಮತ್ತು ಬೋಧನೆಗಳನ್ನೊಳಗೊಂಡ, ಶ್ರೀ ಬೆಳಗೆರೆ ಕೃಷ್ಣಶಾಸ್ತ್ರಿಗಳವರಿಂದ ವಿರಚಿತವಾದ "ಯೇಗ್ದಾಗೆಲ್ಲಾ ಐತೆ" ಎಂಬ ಪುಸ್ತಕವನ್ನು "Yoga has it all" ಎಂಬ ಶೀರ್ಷಿಕೆಯ ಆಂಗ್ಲಭಾಷಾನುವಾದವನ್ನು ಮಾಡಿದ್ದಾರೆ. ಇವರು ನನ್ನ ಮಾತೆಯವರಾದ ಶ್ರೀಮತಿ ಸಾವಿತ್ರಿ ನಾಗರಾಜ್‌ರವರ ಅನೇಕ ಸಾಹಿತಿಗಳಿಂದ ಮೆಚ್ಚುಗೆ ಪಡೆದಿರುವ, ವಿಪುಲ ಕವನ ರಚನೆಗೆ ನೀಡಿರುವ ಸ್ಫೂರ್ತಿ ಮತ್ತು ಮಾರ್ಗದರ್ಶನ ಅಮೋಘ ಮತ್ತು ಚಿರಸ್ಮರಣೀಯ. ಕರ್ನಾಟಕದಲ್ಲಿ ನ್ಯಾಯಾಧೀಶರುಗಳ ತರಬೇತಿಗೆ ಸ್ಥಾಪಿಸಲ್ಪಟ್ಟಿರುವ "Judicial Academy" ಎಂಬ ಸಂಸ್ಥೆಯಲ್ಲಿ ಹೊಸದಾಗಿ ಆರಿಸಲ್ಪಟ್ಟ ಪ್ರಥಮ ಹಂತದ ಒಂದು ತಂಡದ ನ್ಯಾಯಾಧೀಶರುಗಳಿಗೆ ಅವಶ್ಯಕವಾದ ಆಂಗ್ಲಭಾಷಾ ವ್ಯಾಕರಣವನ್ನು ಬೋಧಿಸಿ ಅವರ ಮೆಚ್ಚುಗೆಯನ್ನು ಪಡೆದು ಒಂದು ನೆನಪಿನ ಕಾಣಿಕೆಯನ್ನೂ ಪಡೆದಿರುವುದು ಉಲ್ಲೇಖನೀಯ.

ಸರ್ವೋದಯ ಆಂದೋಲನದ ಮುನ್ನಡೆ

೨೦೧೮ಳ ಜುಲೈ ೨೭, ೨೮ ಮತ್ತು ೨೯ರಂದು ವಾರಣಾಸಿಯ ಸರ್ವ ಸೇವಾ ಸಂಘ ಪರಿಸರದಲ್ಲಿ ಉತ್ತರ ಪ್ರದೇಶ ಸರ್ವೋದಯ ಮಂಡಲದ ಆಶ್ರಯದಲ್ಲಿ ಲೋಕ ಸೇವಕ ಮತ್ತು ಸರ್ವೋದಯ ಮಿತ್ರರ ಮೂರು ದಿನದ ಪ್ರಶಿಕ್ಷಣ ಕಾರ್ಯಕ್ರಮ ನಡೆಯಿತು. ಅದರ ಉದ್ಘಾಟನೆಯನ್ನು ಸರ್ವ ಸೇವಾ ಸಂಘದ ಅಧ್ಯಕ್ಷ ಮಹದೇವ್ ವಿದ್ರೋಹಿ ಮಾಡಿದರು. ಮೊದಲನೇಯ ಗೋಷ್ಠಿಯಲ್ಲಿ ಅವರು ವರ್ತಮಾನ ಸಮಯದ ಆಹ್ವಾನಗಳು ಮತ್ತು ಪರಿಹಾರ ಹಾಗೂ ಸರ್ವೋದಯ ವಿಚಾರದ ಪ್ರಸ್ತುತತೆ ಬಗ್ಗೆ ಸವಿಸ್ತಾರವಾಗಿ ತಿಳಿಹೇಳಿದರು. ಉತ್ತರ ಪ್ರದೇಶ ಸರ್ವೋದಯ ಮಂಡಲದ ಅಧ್ಯಕ್ಷ ಡಾ// ಮಧುಸೂಧನ್ ಸಾಧನ, ಯೋಗ, ಪ್ರಾಣಾಯಾಮ, ಸ್ವಧ್ಯಾಯ ಮತ್ತು ಮಾನವ ಆರೋಗ್ಯದ ಬಗ್ಗೆ ಗಂಭೀರವಾಗಿ ಮಾತನಾಡಿದರು. ಸರ್ವೋದಯ ಜಗತ್ತಿನ ಕಾರ್ಯಕಾರಿ ಸಂಪಾದಕ ಅಶೋಕ್ ಮೋತಿ ಶ್ರಮದಾನದ ಮಹತ್ವವನ್ನು ವಿಸ್ತೃತವಾಗಿ ತಿಳಿಸಿದರು. ಗ್ರಾಮ ಸ್ವರಾಜ್ಯದ ಬಗ್ಗೆ ಸರ್ವ ಸೇವಾ ಸಂಘದ ಮಾಜಿ ಅಧ್ಯಕ್ಷರಾದ ಅಮರನಾಥ್ ಗ್ರಾಮ ಸ್ವರಾಜ್ಯದ ಮೇಲೆ ವಿವರಾಗಿ ವಿಷಯ ಹೇಳಿದರು. ತಡ ಮಾಡದೆ ಈ ನಿಟ್ಟಿನಲ್ಲಿ ಸಾರ್ಥಕವಾದ ಪ್ರಯತ್ನಮಾಡಲು ಹೇಳಿದರು. ಜಲ-ಜಂಗಲ್-ಜಮೀನ್ ಬಗ್ಗೆ ಅಶೋಕ್ ಭಾರತ್ ತುಂಬಾ ಮಹತ್ವಪೂರ್ಣ ವ್ಯಾಖ್ಯಾನ ಮಾಡಿದರು.

****

ಸೆಪ್ಟೆಂಬರ್ ೨೩ ಮತ್ತು ೨೪ನೇ ತಾರೀಖು ವಾರಣಾಸಿಯಲ್ಲಿ ಅಖಿಲ ಭಾರತ ಮಧ್ಯಪಾನ ನಿಷೇಧ ಕಾರ್ಯಕರ್ತರ ಸಮ್ಮೇಳನ ನಡೆಯಿತು. ಸಮ್ಮೇಳನದ ವಿವರಗಳನ್ನು ಆ ನಂತರ ತಿಳಿಸಲಾಗುವುದು.


****

ಶಿಕ್ಷಕರ ದಿನಾಚರಣೆ ನಿಮಿತ್ತ ಮೈಸೂರಿನ ಪ್ರತಿಷ್ಠಿತ ಬಾಸುದೇವ್ ಸೋಮಾನಿ ಕಾಲೇಜ್‌ನಲ್ಲಿ ವಿದ್ಯಾರ್ಥಿಗಳನ್ನು ಕುರಿತು ಸರ್ವೋದಯ ವಿಚಾರವನ್ನು ಹೇಳಲಾಯಿತು. ಗಾಂಧೀ, ವಿನೋಬಾಭಾವೆ ಮತ್ತು ಜಯಪ್ರಕಾಶ್ ನಾರಾಯಣ್ ಹೇಗೆ ಸಾಮಾಜಿಕ ಪರಿವರ್ತನೆಯ ಮತ್ತು ಹೊಸ ಮೌಲ್ಯಗಳ ಸ್ಥಾಪನೆಯ ಪ್ರತಿಪಾದಕ ಶಿಕ್ಷಕರಾಗಿ ಕೆಲಸ ಮಾಡಿದರೆಂಬುದನ್ನು ತಿಳಿಸಲಾಯಿತು.

****

ಪಾಂಡವಪುರದ "ಪುಸ್ತಕಮನೆ" ಮನೆಯಲ್ಲಿ ಕೆಲ ಸಹೃದಯರು ಸೇರಿ ಸರ್ವೋದಯ ಸಮಾಜ ರಚನೆಯ ಬಗ್ಗೆ ಚಿಂತನೆ ನಡೆಸಿದರು. ■

ಜನಪದ ನಿಲಯದ ಅಂತರಂಗದಲ್ಲಿ – ೧೨೬



ಜನಪದ ಸೇವಾ ಟ್ರಸ್ಟಿನಲ್ಲಿ ಸಕಲ ಕಾರ್ಯ ಚಟುವಟಿಕೆಗಳ ಆಧಾರ ಸಂತೋಷ್ ಮತ್ತು ಸುಘೋಷ್. ಟ್ರಸ್ಟಿನ ಇತರ ಎಲ್ಲಾ ಧರ್ಮದರ್ಶಿಗಳ ಪಾತ್ರವೂ ಹಿರಿದಾಗಿದೆ. ಆದರೆ ಪ್ರತ್ಯಕ್ಷ ಕಾರ್ಯಕ್ಷೇತ್ರದಲ್ಲಿ ಸಂತೋಷ್ ಮತ್ತು ಸುಘೋಷರ ಪಾತ್ರ ಮುಖ್ಯವೆನಿಸುತ್ತದೆ. ಏಕೆಂದರೆ ಅವರು ಟ್ರಸ್ಟಿನ ಕಾರ್ಯಕ್ಷೇತ್ರದಲ್ಲಿಯ ನಿವಾಸಿಗಳು ಮತ್ತು ಬೇರೆ ಸದಸ್ಯರಿಗಿಂತ ಕಡಿಮೆ ವಯಸ್ಸಿನವರು. ಇತ್ತೀಚೆಗೆ ಸಂತೋಷ್ ಅವರು ಕಾರ್ಯನಿಮಿತ್ತ ಮೋಟಾರ್ ಸೈಕಲ್ ಮೇಲೆ ಪ್ರಯಾಣಿಸುತ್ತಿದ್ದಾಗ ಅಪಘಾತಕ್ಕೆ ಒಳಗಾದರು. ಬಲಗಾಲಿನ ಮೂಳೆ ಮುರಿಯಿತು ಮತ್ತು ಎಡಕೈಯಿಯ ಬೆರಳುಗಳು ನೋವಿಗೆ ತುತ್ತಾದವು. ಮೈಸೂರಿನ ಆಸ್ಪತ್ರೆಯೊಂದರಲ್ಲಿ ದಾಖಲಾಗಿ ಸೂಕ್ತ ಚಿಕಿತ್ಸೆ ಪಡೆದರು. ಈಗ ವಾಕರ್ ಸಹಾಯದಿಂದ ಮೆಲ್ಲಗೆ ಕಾಲು ಎಳೆದುಕೊಂಡು ನಡೆಯುತ್ತಾರೆ. ಮೊದಲಿನಂತೆ ನಡೆಯಲು ಸಾಧ್ಯವಾಗುವುದಕ್ಕೆ ಇನ್ನು ಕೆಲ ಸಮಯ ಬೇಕಾಗುವುದು. ಸಂತೋಷ್ ಅಪಘಾತಕ್ಕೀಡಾಗಿ ಆಸ್ಪತ್ರೆ ಸೇರಿದಾಗ ಟ್ರಸ್ಟಿನ ಧರ್ಮದರ್ಶಿಗಳು ಮತ್ತು ಅಸಂಖ್ಯಾತ ಅಭಿಮಾನಿಗಳು ಮತ್ತು ಅವರ ಮಿತ್ರರು ವ್ಯಕ್ತಪಡಿಸಿದ ಸಹಾನುಭೂತಿ ಅಪಾರವಾದುದು. ಇವರೆಲ್ಲರ ಪ್ರೇಮ ಪುರಸ್ಸರವಾದ ಮತ್ತು ಅಂತಃಕರಣ ಪೂರ್ಣವಾದ ಶುಭ ಹಾರೈಕೆಯ ಕಾರಣದಿಂದಾಗಿ ಸಂತೋಷ್ ಅವರ ಕಾಲಿನ ಆಪರೇಷನ್ ಯಶಸ್ವಿಯಾಗಿ ಆಯಿತು. ಹಾಗೂ ಈಗ ಗುಣಮುಖರಾಗಿ ಚೇತರಿಸಿಕೊಳ್ಳುತ್ತಿದ್ದಾರೆ. ಅಪಘಾತದ ಕಾರಣದಿಂದಾಗಿ ಜೀವಕ್ಕೆ ಯಾವ ಹಾನಿಯೂ ಆಗದಂತೆ ಬದುಕುಳಿಸಿದ ಆ ಅಗೋಚರ ದೈವೀ ಶಕ್ತಿಗೆ ನಮೋನಮಃ. ಯಾವುದೇ ವ್ಯಕ್ತಿಯ ಮಹತ್ವ ಕುಟುಂಬದಲ್ಲಾಗಲೀ, ಸಂಸ್ಥೆಯಲ್ಲಾಗಲೀ, ಸಮಾಜದಲ್ಲಾಗಲೀ ಕಂಡು ಬರುವುದು ಆ ವ್ಯಕ್ತಿಗೆ ತೊಂದರೆಯಾದಾಗ. ಇದು ಕೇವಲ ಮನುಷ್ಯ ಲೋಕಕ್ಕೆ ಮಾತ್ರ ಸೀಮಿತವಲ್ಲ. ಪ್ರಾಣಿ ವರ್ಗಕ್ಕೂ ಸಂಬಂಧಿಸಿದ್ದಾಗಿದೆ. ನಿರ್ಜೀವ ಜಗತ್ತಿಗೂ ಸಂಬಂಧಿಸಿದ್ದಾಗಿದೆ. ಸಂತೋಷ್‌ರವರ ತಾತ್ಕಾಲಿಕ ರಜೆಯಿಂದಾಗಿ ಟ್ರಸ್ಟಿನ ಪ್ರಚಲಿತ ಚಟುವಟಿಕೆಗಳಿಗೆ ಕೊಂಚ ಹಿನ್ನಡೆಯಾಗಿದೆ. ಇದರ ಅನುಭವ ಟ್ರಸ್ಟಿನ ಎಲ್ಲ ಕಾರ್ಯಕರ್ತರಿಗೂ ಮತ್ತು ಟ್ರಸ್ಟಿನೊಂದಿಗೆ ಬೇರೆ ಬೇರೆ ವ್ಯವಹಾರಗಳಿಗಾಗಿ ಸಂಪರ್ಕವಿರಿಸಿಕೊಂಡಿದ್ದವರಿಗೂ ಅನುಭವವಾಗುತ್ತಿದೆ. ಸ್ವತಃ ಸಂತೋಷ್ ಅವರಿಗೂ ಈ ಮಾತಿನ ಅನುಭವವಾಗುತ್ತಿದೆ. ಅದಕ್ಕಾಗಿ ಅವರಿಗೆ ಖಿನ್ನತೆಯೂ ಇದೆ. ಆದಷ್ಟೂ ಬೇಗ ಸಂತೋಷ್ ಪೂರ್ಣವಾಗಿ ಗುಣಮುಖರಾಗಿ ಎಂದಿನಂತೆ ಕ್ರಿಯಾ ಚಟುವಟಿಕೆ ಉಳ್ಳವರಾಗಲೆಂದು ಮತ್ತು ಟ್ರಸ್ಟನ್ನು ಮುನ್ನಡೆಸಿಕೊಂಡು ಹೋಗಲೆಂದು ಹಾರೈಸೋಣ.

ಬಾಂಧವ್ಯ

ಜನಪದ ವಿಚಾರವು ಚಂದಾದಾರರೊಂದಿಗಿನ ತನ್ನ ಬಾಂಧವ್ಯವನ್ನು ಸದಾಸ್ಮರಿಸುತ್ತದೆ.

ಶ್ರೀ.ಜಿ.ವೆಂಕಟೇಶ್, ಶ್ರೀ.ಬಿ.ಆಕಾಶ್,
ಡಾ. ಶರಣ್ ಅಂಗಡಿ, ಶ್ರೀಮತಿ.ಟಿ. ಪದ್ಮ – ಬೆಂಗಳೂರು
ಶ್ರೀ.ಅ.ಮ.ಶ್ಯಾಮೇಶ್, ಶ್ರೀ.ಕೆ.ಎಸ್.ಸೋಮಶೇಖರ್ – ಕೃಷ್ಣರಾಜಪೇಟೆ
ಶ್ರೀ.ಜಿ.ಎನ್.ಕುಮಾರ್, ಡೆಮಾಸ್ಟ್ರೆಶನ್ ಶಾಲ್,
ಶ್ರೀ.ಎಮ್.ಎಸ್.ಸತೀಶ್, ಮಹಾದೇವಪ್ಪ – ಮೈಸೂರು
ಶ್ರೀ.ಎ.ಹೆಚ್.ಚನ್ನೇಗೌಡ, ಶ್ರೀ.ಕೆ.ಮಾಯಿಗೌಡ,
ಶ್ರೀ.ಮಲ್ಲಾರಾಧ್ಯ ಪ್ರಸನ್ನ , ಶ್ರೀಮತಿ.ನಾಗವೇಣಿ – ಮಂಡ್ಯ
ಶ್ರೀ.ಅರ್ಜುನಪುರಿ ಅಪ್ಪಾಜಿಗೌಡರು – ಮದ್ದೂರು

ಇವರು ಪತ್ರಿಕೆಯ ಚಂದಾ ನವೀಕರಿಸಿದ್ದಕ್ಕಾಗಿ ಹಾಗೂ
ಹೊಸದಾಗಿ ಪತ್ರಿಕೆಗೆ ಚಂದಾದಾರರಾದ

ಶ್ರೀ. ಸೂರ್ಯಕುಮಾರ್ ಕಾಕುಂಜೆ,
ಶ್ರೀ.ಸಿ.ಎಮ್.ಚಂದ್ರಶೇಖರ್, ಶ್ರೀ.ವೈ.ಜಿ.ಮುರಳೀಧರನ್,
ಶ್ರೀ.ನಗಾರಿ ಬಾಬಯ್ಯ , ಶ್ರೀ.ಮುರಳೀಧರ.ಎಸ್,
ಶ್ರೀ.ವೇಣುಗೋಪಾಲ್.ಎಸ್,ಶ್ರೀ.ಗಿರೀಶ್.ಎನ್ – ಬೆಂಗಳೂರು
ಶ್ರೀಮತಿ.ಬಿ.ಎಂ.ಗ^ಗಾಂಬಿಕೆ – ಕುದೇರುಗ್ರಾಮ,
ಡಾ//ಹಾಲತಿ ಸೋಮಶೇಖರ್ – ಮೈಸೂರು,
ಶ್ರೀ.ಅಡೂರು ಕೃಷ್ಣರಾವ್ – ಮಂಗಳೂರು,
ಶ್ರೀ.ಎಮ್.ಎಸ್.ವಿರೂಪಾಕ್ಷಗೌಡ – ಶ್ರೀರಂಗಪಟ್ಟಣ,
ಶ್ರೀ.ವೈ.ಎಸ್.ಕುತನಿ – ಸವಣೂರು
ಶ್ರೀ.ಕೆ.ಸತ್ಯನಾರಾಯಣ ರಾವ್ – ಫಳಾರಮ್
ಶ್ರೀ.ದಯಾನಂದ ಕುಲಕರ್ಣಿ – ತುಮಕೂರು
ಶ್ರೀ.ಎಸ್.ಎನ್.ಗಿರೀಶ್ – ಭುವನೇಶ್ವರ, ಒರಿಸ್ಸಾ

ಇವರಿಗೆ ಜನಪದ ವಿಚಾರದ ಕೃತಜ್ಞತೆಗಳು

ಲೇಖನಗಳಲ್ಲಿಯ ವಿಚಾರಗಳಿಗೆ ಆಯಾ ಲೇಖಕರು ಹೊಣೆ

ತೆರೆದ ಅಂಚೆ

KA / SK / MND / 470 / 2012-2014
Regd. no. KAR / KAN / 2000 / 3820

ಶ್ರೀಮತಿ/ ಶ್ರೀ..

....

....

JANAPADA VICHARA
Kannada Monthly Digest Edited Printed and Published by Surendra Koulagi at janapada seva Trust
Melkote, Dist- Mandya - 571431. Phone : 08236 316344/ 299854
e-mail : janapada@yahoo.com - Web : janapada.net
Printed at Sanketh Mudrna, Melkote